www.janavaadi.in

# ಜನವಾಣಿ

ರಾಯಚೂರು
ಕಲಬುರಗಿ
ಯಾದಗಿರಿ
ಕೊಪ್ಪಳ
ಬಳ್ಳಾರಿ
ಬೀದರ್

ಸಂಪಾದಕ : ಬಸವರಾಜ ಹೆಚ್
Editor : Basavaraj H

ಜನರ ಅಂತರಂಗದ ಧ್ವನಿ
ಕನ್ನಡ ದಿನಪತ್ರಿಕೆ

JANAVAADI
Kannada Daily News Paper

## ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ, ಸದಸ್ಯರಿಗೆ ಸನ್ಮಾನ



ಜನವಾದಿ ವಾರ್ತೆ

ಸಿಂಧನೂರು ಜು 07 – ಸಿಂಧನೂರು ನಗರಾಭಿವೃದ್ಧಿ ಪ್ರಾಧಿಕಾರದ ನೂತನ ಅಧ್ಯಕ್ಷ ಬಾಬುಗೌಡ ಬಾದರ್ಲಿ ಹಾಗೂ ನೂತನ ಸದಸ್ಯರಿಗೆ ಕೆಪಿಸಿಸಿ ಸದಸ್ಯ ನಲ್ಲಾ ವೆಂಕಟೇಶ್ವರರಾವ್ ನೇತೃತ್ವದಲ್ಲಿ ಸನ್ಮಾನಿಸಿ ಗೌರವಿಸಲಾಯಿತು.

ಚಂದ್ರೇಗೌಡ ವಿರುಪಾಪುರ, ದೇವರಾಜ ವಿರುಪಾಪುರ, ಸಿದ್ದನಗೌಡ ಮಲ್ಲಾಪುರ, ಶಿವರಾಜ ಅರಳಹಳ್ಳಿ, ಪಂಪಾಪತಿ ಅರಳಹಳ್ಳಿ, ವೆಂಕಾರೆಡ್ಡಿ, ಸಣ್ಣಮಲ್ಲಪ್ಪ, ಶ್ರೀರಾಮಮೂರ್ತಿ ಮಲ್ಲದಗುಡ್ಡ, ಶೇಖರಗೌಡ ದೇವರಮನಿ ತುರ್ವಿಹಾಳ, ಬಸವರಾಜ ಕುಲ್ಕರ್ಣಿ ವಿರುಪಾಪುರ, ವಿರುಪಾಪುರ ಗ್ರಾ.ಪಂ.ನ ಮುಖಂಡರು ಇದ್ದರು.

ಸಂಪುಟ : 11 ಸಂಚಿಕೆ : 319 ಪುಟ:4 ರಾಯಚೂರು ಮಂಗಳವಾರ 08-07-2025 RNI NO.KARKAN/2012/56428 ಮೊಬೈಲ್: 9448300139,9449711232. e-mail : janavaadi@gmail.com ಬೆಲೆ : 2 ರೂ.
VOLUME : 11 ISSUE : 318 PAGES : 4 RAICHUR TUESDAY 08-07-2025 RNI NO.KARKAN/2012/56428 MOBILE:9448300139,9449711232. E-MAIL:janavaadi@gmail.com PRICE : 2 RS.

### ರಾಯಚೂರು ಪೇಟೆ ದರ

**ಸಣ್ಣ ಭತ್ತ(ಸೋನಾ)**
ಕನಿಷ್ಠ : 1805
ಗರಿಷ್ಠ : 1941

**ಒಣಕಡಲೆ**
ಕನಿಷ್ಠ : 5725
ಗರಿಷ್ಠ : 5811

**ಕೆಂಪು ತೊಗರಿ**
ಕನಿಷ್ಠ : 6150
ಗರಿಷ್ಠ : 6553

**ಶೇಂಗಾ (ಗುಂಗ್ರು)**
ಕನಿಷ್ಠ : 4419
ಗರಿಷ್ಠ : 5009

**ಸೂರ್ಯಕಾಂತಿ**
ಕನಿಷ್ಠ : –
ಗರಿಷ್ಠ : –

**ಈರುಳ್ಳಿ**
ಕನಿಷ್ಠ : –
ಗರಿಷ್ಠ : –

### ರಾಯಚೂರು ಜಿಲ್ಲೆ
ಇಂದಿನ ಹವಾಮಾನ ಮುನ್ಸೂಚನೆ



ಗರಿಷ್ಠ : 28 ಸೆಲ್ಸಿಯಸ್
ಕನಿಷ್ಠ : 24 ಸೆಲ್ಸಿಯಸ್

### ಬಿಜೆಪಿಗೆ ನೂತನ ಸಾರಥಿ:

# ನಿರ್ಮಲಾ ಸೀತಾರಾಮನ್ ಸೇರಿದಂತೆ ಮೂವರು ಮಹಿಳೆಯರ ಹೆಸರು ಮುಂಚೂಣಿಗೆ!

ನವದೆಹಲಿ ಜು 7– ಬಿಜೆಪಿಯ ನೂತನ ರಾಷ್ಟ್ರೀಯ ಅಧ್ಯಕ್ಷರ ಕುರಿತು ಹೆಚ್ಚುತ್ತಿರುವ ಊಹಾಪೋಹಗಳ ನಡುವೆ ಭೂಪೇಂದ್ರ ಯಾದವ್, ಧರ್ಮೇಂದ್ರ ಪ್ರಧಾನ್, ಮನೋಹರ್ ಲಾಲ್ ಖಟ್ಟರ್, ಶಿವರಾಜ್ ಸಿಂಗ್ ಚೌಹಾಣ್, ಪ್ರಲ್ಹಾದ್ ಜೋಶಿ ಮತ್ತು ಇತರ ಪ್ರಮುಖರ ನಡುವೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸೇರಿದಂತೆ ಮೂವರು ಮಹಿಳೆಯರ ಹೆಸರುಗಳು ಇದ್ದಕ್ಕಿದ್ದಂತೆ ಮುಂಚೂಣಿಗೆ ಬಂದಿವೆ.



ಬಿಜೆಪಿಯ ಹಲವು ಹಿರಿಯ ನಾಯಕರು ಈ ಮೂವರು ಮಹಿಳೆಯರಲ್ಲಿ ಒಬ್ಬರನ್ನು ಉನ್ನತ ಹುದ್ದೆಗೆ ಆಯ್ಕೆ ಮಾಡುವ ಸಾಧ್ಯತೆಯನ್ನು ದೃಢವಾಗಿ ಬೆಂಬಲಿಸಿದಿದ್ದರೂ ಸದ್ಯ ಆಂಧ್ರಪ್ರದೇಶದ ಮಾಜಿ ಬಿಜೆಪಿ ಮುಖ್ಯಸ್ಥೆ ದಗ್ಗುಬಾಟಿ ಪುರಂದೇಶ್ವರಿ, ವನತಿ ಶ್ರೀನಿವಾಸನ್ (ಬಿಜೆಪಿ ಮಹಿಳಾ ಮೋರ್ಚಾದ ರಾಷ್ಟ್ರೀಯ ಅಧ್ಯಕ್ಷೆ) ಮತ್ತು ಪ್ರಸ್ತುತ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಹೆಸರುಗಳು ಜೋರಾಗಿ ಕೇಳಿಬರುತ್ತಿವೆ.

ಪುರಂದೇಶ್ವರಿ ಅವರು ಕಾಂಗ್ರೆಸ್‌ನಿಂದ ಪಕ್ಷಾಂತರಗೊಂಡ ನಂತರ ಪಕ್ಷದಲ್ಲಿ ಇನ್ನೂ 15 ವರ್ಷಗಳನ್ನು ಪೂರ್ಣಗೊಳಿಸದ ಕಾರಣ ಅವರು ಅರ್ಹತೆ ಹೊಂದಿಲ್ಲ ಎಂದು ಮೂಲಗಳು ಹೇಳಿವೆ. ಬಿಜೆಪಿಯ ಸಂವಿಧಾನದ ಪ್ರಕಾರ ರಾಷ್ಟ್ರೀಯ ಅಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿಯು ಕನಿಷ್ಠ 15 ವರ್ಷಗಳ ಕಾಲ ಪ್ರಾಥಮಿಕ ಸದಸ್ಯನಾಗಿರಬೇಕು. ಆದಾಗ್ಯೂ, ಆಕೆಯ ವಿಷಯದಲ್ಲಿ ಪಕ್ಷವು ಒಂದು ವಿನಾಯಿತಿಯನ್ನು ಮಾಡಬಹುದು ಎನ್ನಲಾಗಿದೆ.

ವನತಿ ಶ್ರೀನಿವಾಸನ್, ದೇಶದಾದ್ಯಂತ ಮಹಿಳಾ ಮೋರ್ಚಾ ನಡೆಸುತ್ತಿರುವ ಹಲವಾರು ಕಾರ್ಯಕ್ರಮಗಳಿಗಾಗಿ ವ್ಯಾಪಕವಾಗಿ ಗುರುತಿಸಲ್ಪಟ್ಟಿರುವ ಮತ್ತೋರ್ವ ಅಭ್ಯರ್ಥಿಯಾಗಿದ್ದಾರೆ. ಆದರೆ ಅವರಿಗೆ ಹಿಂದಿ ಭಾಷೆಯಲ್ಲಿ ನಿರರ್ಗಳ ಕೊರತೆಯಿದೆ, ಇದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಿಗೆ ಅತ್ಯಗತ್ಯವಾಗಿದೆ. ಅವರನ್ನು ಆಯ್ಕೆ ಮಾಡಿದರೆ ಅದು ದೊಡ್ಡ ಆಶ್ಚರ್ಯಕ್ಕೆ ಕಾರಣವಾಗುತ್ತದೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಈ ಮಧ್ಯೆ ಆರೆಸ್ಸೆಸ್ ನಿರ್ಧಾರಕ್ಕೆ ಬದ್ಧರಾಗಿ ಉನ್ನತ ಹುದ್ದೆಗೆ ಮಹಿಳಾ ನಾಯಕಿಯನ್ನು ಪಕ್ಷ ಬಯಸುತ್ತದೆ ಎಂದು ಊಹಿಸಲಾಗಿರುವುದರಿಂದ ಡಾ.ಸುಧಾ ಯಾದವ್ ಅವರ ಹೆಸರು ಬಹಳ ಹಿಂದಿನಿಂದಲೂ ಪರಿಗಣನೆಯಲ್ಲಿದೆ.

ಬಿಜೆಪಿಯ ಕೇಂದ್ರ ಚುನಾವಣಾ ಸಮಿತಿ ಮತ್ತು ಅದರ ಸಂಸದೀಯ ಮಂಡಳಿಯ ಸದಸ್ಯರಾಗಿರುವ ಯಾದವ್ ಅವರು ಆರ್‌ಎಸ್‌ಎಸ್ ಮತ್ತು ಪ್ರಧಾನಿ ನರೇಂದ್ರ ಮೋದಿಯವರ ಬೆಂಬಲವನ್ನು ಹೊಂದಿದ್ದಾರೆ. ಅವರು ಐಐಟಿ ರೂರ್ಕಿಯಿಂದ ರಸಾಯನಶಾಸ್ತ್ರದಲ್ಲಿ ಪಿಎಚ್‌ಡಿ ಪಡೆದಿದ್ದಾರೆ. ಅವರು ಉತ್ತಮವಾಗಿ ಮಾತನಾಡಲಿದ್ದು, ಅವರು ಆಯ್ಕೆಯಾದರೂ ಅಚ್ಚರಿಪಡಬೇಕಾಗಿಲ್ಲ.

ಅವರಿಂದ ಬಿಹಾರದಲ್ಲಿ ಆರ್‌ಜೆಡಿ ಮತ್ತು ಯುಪಿಯಲ್ಲಿ ಎಸ್‌ಪಿ ಪ್ರಾಬಲ್ಯ ಎಂದು ಪರಿಗಣಿಸಲಾದ ಯಾದವ ಮತ ಬ್ಯಾಂಕ್ ಬ್ಯಾಂಕ್ ಸೆಳೆಯಲು ನೆರವಾಗಲಿದೆ ಎಂದು ಬಿಜೆಪಿ ನಾಯಕರೊಬ್ಬರು ತಿಳಿಸಿದರು.

ಜುಲೈ 10 ಮತ್ತು 18 ರ ನಡುವೆ ಬಿಜೆಪಿ ತನ್ನ ಸಾರಥಿಯನ್ನು ಘೋಷಿಸುವ ಸಾಧ್ಯತೆಯಿದೆ. ಪ್ರಸ್ತುತ ಮುಂಚೂಣಿಯಲ್ಲಿರುವ ಹೆಸರುಗಳಲ್ಲಿ ನಿರ್ಮಲಾ ಸೀತಾರಾಮನ್, ದಗ್ಗುಬಾಟಿ ಪುರಂದೇಶ್ವರಿ, ವನತಿ ಶ್ರೀನಿವಾಸನ್, ಡಾ ಸುಧಾ ಯಾದವ್, ಅಪರಾಜಿತಾ ಸಾರಂಗಿ, ಭೂಪೇಂದ್ರ ಯಾದವ್, ಧರ್ಮೇಂದ್ರ ಪ್ರಧಾನ್, ಮನೋಹರ್ ಲಾಲ್ ಖಟ್ಟರ್, ಶಿವರಾಜ್ ಸಿಂಗ್ ಚೌಹಾಣ್, ಪ್ರಲ್ಹಾದ್ ಜೋಶಿ, ಅರ್ಜುನ್ ರಾಮ್ ಮೇಘವಾಲ್, ಜಿ. ವಿನೋದ್ ತಾವ್ಡೆ, ಮತ್ತು ಕೆ. ಅಣ್ಣಾಮಲೈ ಇದ್ದಾರೆ. ತಮಿಳುನಾಡು ಮಾಜಿ ರಾಜ್ಯಪಾಲರಾದ ಡಾ ತಮಿಳಿಸೈ ಸೌಂದರರಾಜನ್ ಹೆಸರು ಕೂಡಾ ಕೇಳಿಬರುತ್ತಿದೆ.

## ಕುಡಿಯವ ನೀರಿಗಾಗಿ ಮನವಿ – ಬಯ್ಯಾಪೂರು

ಜನವಾದಿ ವಾರ್ತೆ

ಮುದಗಲ್ ಜು 7– ಪಟ್ಟಣದ ಕುಡಿಯುವ ನೀರಿಗಾಗಿ ವಿಧಾನಪರಿಶತ್ ಸದಸ್ಯ ಶರಣಗೌಡ ಬಯ್ಯಾಪೂರ ನೇತೃತ್ವದಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಹಾಗೂ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ ಮನವಿ ಪತ್ರ ಸಲ್ಲಿಸಲಾಗಿದೆ ಎಂದು ಮಾಜಿ ಸಚಿವ ಅಮರೇಗೌಡ ಪಾಟೀಲ್ ಬಯ್ಯಾಪೂರು ಹೇಳಿದರು



ಪಟ್ಟಣದ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿ ಅವರು ಕುಡಿಯುವ ನೀರಿಗಾಗಿ ರಾಜ್ಯ ಸರಕಾರಕ್ಕೆ ಜನಪ್ರತಿನಿಧಿಗಳಿಂದ, ಪಟ್ಟಣದ ಸಂಘ ಸಂಸ್ಥೆಗಳಿಂದ ಹೆಚ್ಚಿನ ಒತ್ತಡ ಹಾಕಬೇಕು.ಕುಡಿಯುವ ನೀರಿಗಾಗಿ ಬಾಕಿ ಅನುದಾನದ ನೆರವು ಕೋರಿದೆ .

ಪಟ್ಟಣದ ಅಭಿವೃದ್ಧಿಗೆ ರಾಜಕೀಯ ಇಚ್ಛಾಶಕ್ತ ಕೊರತೆಯಾಗಿದೆ. ಸರಕಾರ ಯಾವದೇ ಇದ್ದರೂ ನಮ್ಮ ರಾಜಕಾರಣ ಪಟ್ಟಣದ ಅಭಿವೃದ್ಧಿಗೆ ಸೀಮಿತಗೊಳಿಸಿಕೊಂಡು ಅಭಿವೃದ್ಧಿಗೆ ಸ್ಥಳಿಯ ರಾಜಕಾರಣಿಗಳು ಜನಪ್ರತಿನಿಧಿಗಳ ಮೇಲೆ, ಸರಕಾರದ ಮೇಲೆ ಒತ್ತಡ ಹಾಕಿದರೆ ಮಾತ್ರ ಅಭಿವೃದ್ಧಿ ಸಾಧ್ಯ. ರಾಜಕಾರಣಿಗಳು ತಮ್ಮ ಸ್ವಾರ್ಥತೆಯನ್ನು ಬಿಟ್ಟು ಪಟ್ಟಣದ ಅಭಿವೃದ್ಧಿಗೆ ಆದ್ಯತೆ ನೀಡಿದರೆ ಹಾಗೂ ಸಿಎಂ ಬದಲಾವಣೆ ವಿಷಯ ಹೈಕಮಾಂಡ್ ತೀರ್ಮಾನಕ್ಕೆ ಬಿಟ್ಟ ವಿಷಯ ಎಂದರು ಈ ಸಂದರ್ಭದಲ್ಲಿ ಪುರಸಭೆ ಮಾಜಿ ಅಧ್ಯಕ್ಷ ಅಶೋಕಗೌಡ ಪಾಟೀಲ, ಸುರೇಶ ಶೇಠ ಇದ್ದರು.

## ಜಲ ಜೀವನ ಮಿಷನ್ ಯೋಜನೆ ತ್ವರಿತವಾಗಿ ಪೂರ್ಣಗೊಳಿಸಿ: ರಾಹುಲ್

ಜನವಾದಿ ವಾರ್ತೆ

ರಾಯಚೂರು ಜು 07 – ಪ್ರತಿ ಮನೆಗೂ ನಳ ಸಂಪರ್ಕದ ಮೂಲಕ ಶುದ್ಧ ಕುಡಿಯುವ ನೀರು ಪೂರೈಸುವ ಜಲ ಜೀವನ ಮಿಷನ್ ಯೋಜನೆ ಅನುಷ್ಠಾನ ಕಾರ್ಯವನ್ನು ಜಿಲ್ಲೆಯಲ್ಲಿ ತ್ವರಿತವಾಗಿ ಪೂರ್ಣಗೊಳಿಸಬೇಕು ಹಾಗೂ ಕಾಮಗಾರಿಯಲ್ಲಿ ಗುಣಮಟ್ಟ ಕಾಯ್ದುಕೊಳ್ಳುವಂತೆ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ತುಕಾರಾಂ ಪಾಂಡ್ವೆ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಜುಲೈ 07ರ ಸೋಮವಾರ ದಂದು ನಗರದ ಜಿಲ್ಲಾ ಪಂಚಾಯಿತಿಯ ಜಲ ನಿರ್ಮಲ ಸಭಾಂಗಣದಲ್ಲಿ ಜಲ ಜೀವನ ಮಿಷನ್ ಯೋಜನೆ ಕಾಮಗಾರಿಗಳ ಸಮಗ್ರ ಅನುಷ್ಠಾನಕ್ಕಾಗಿ



ಜಿಲ್ಲಾ ನೀರು ಮತ್ತು ನೈರ್ಮಲ್ಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಕೈಗೊಂಡಿರುವ ಜಲಜೀವನ್ ಮಿಷನ್ ಯೋಜನೆಯ ಕಾಮಗಾರಿಯು ಗುಣಮಟ್ಟದಿಂದ ಕೂಡಿರಬೇಕು. ಸಂಬಂಧಪಟ್ಟ ಅಧಿಕಾರಿಗಳು ಖುದ್ದಾಗಿ ಕಾಲಕಾಲಕ್ಕೆ ಸ್ಥಳ ಪರಿಶೀಲನೆ ಮಾಡಬೇಕು. ಜಲಜೀವನ್ ಮಿಷನ್ ಯೋಜನೆಯಡಿ ಜಿಲ್ಲೆಗೆ ಸುಮಾರು 84141.25 ಲಕ್ಷ ರೂ. ಅನುದಾನ ಮಂಜೂರಾಗಿದ್ದು, ಸರ್ಕಾರದ ಅನುದಾನ ಸದ್ಬಳಕೆ ಮಾಡಿಕೊಳ್ಳಬೇಕು. ಕೆಲಸ ಸರಿಯಾಗಿ ಮಾಡಬೇಕೆಂದು ಸಂಬಂಧಿಸಿದ ಗುತ್ತಿಗೆದಾರರಿಗೆ ಸೂಚನೆ ನೀಡಬೇಕೆಂದರು.

ಜಲಜೀವನ್ ಮಿಷನ್ ಯೋಜನೆಯಡಿ ಜಿಲ್ಲೆಯ 5 ತಾಲೂಕಿನಲ್ಲಿ ಬ್ಯಾಚ್ 1, 2, 3 ಮತ್ತು 4 ರಲ್ಲಿ ಒಟ್ಟು 1223 ಕಾಮಗಾರಿಗಳನ್ನು ಕೈಗೊಂಡಿದ್ದು, ಇದರಲ್ಲಿ 832 ಕಾಮಗಾರಿಗಳು ಪೂರ್ಣಗೊಂಡಿದ್ದು, 387 ಕಾಮಗಾರಿಗಳು ಪ್ರಗತಿಯಲ್ಲಿದ್ದು, ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸುವಂತೆ ಸಂಬಂಧಿಸಿದ

☛4

## ರಾಜ್ಯಾದ್ಯಂತ ಮಹಾನಗರ ಪಾಲಿಕೆ ನೌಕರರ ಮುಷ್ಕರ

ಬೆಂಗಳೂರು ಜು 7– ನಾಳೆಯಿಂದ ರಾಜ್ಯಾದ್ಯಂತ ಮಹಾನಗರ ಪಾಲಿಕೆ ನೌಕರರು ಮುಷ್ಕರಕ್ಕೆ ಕರೆ ನೀಡಿದ್ದಾರೆ.ರಾಜ್ಯದ 10 ಮಹಾನಗರ ಪಾಲಿಕೆಗಳು ಬಂದ್ ಆಗಲಿದ್ದು, ತಮ್ಮ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಅವರು ಸಾಮೂಹಿಕ ರಜೆ ಹಾಕಿ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಲಿದ್ದಾರೆ.

ಬಿಬಿಎಂಪಿ ಸೇರಿದಂತೆ ವಿವಿಧ ಪಾಲಿಕೆಗಳ ನೌಕರರು ಫ್ರೀಡಂ ಪಾರ್ಕ್‌ನಲ್ಲಿ ತಮ್ಮ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟಿಸಲಿದ್ದಾರೆ. ಪಾಲಿಕೆ ನೌಕರರನ್ನು ಸರ್ಕಾರಿ ನೌಕರರು ಅಂತ ಪರಿಗಣಿಸಬೇಕು.

ಲಾಗ್‌ಸೇಫ್ ಹಾಜರಾತಿ ಪ್ರಕ್ರಿಯೆಯನ್ನ ರದ್ದು ಮಾಡಬೇಕು, ವಿವಿಧ ವಾರ್ಡ್ ಗಳಲ್ಲಿ ಖಾಲಿ ಇರೋ 6 ಸಾವಿರ ಹುದ್ದೆಗಳನ್ನ ಭರ್ತಿ ಮಾಡಬೇಕು, ಪಾಲಿಕೆ ನೌಕರರಿಗೆ ಆಗ್ತಿರೋ ಕೆಲಸದ ಒತ್ತಡ ಕಡಿಮೆ ಮಾಡಬೇಕು, ಪಾಲಿಕೆಯ ಶಿಕ್ಷಣ ವಿಭಾಗದಲ್ಲಿ ಪ್ರಾಂಶುಪಾಲರ ಮೇಲಾಗ್ತಿರೋ ಇಲಾಖಾ ವಿಚಾರಣೆಗಳನ್ನ ಕೈಬಿಡಬೇಕು, ಅಭಿಯಂತರರು, ಸಹಾಯಕ ಅಭಿಯಂತರರಿಗೆ ಮುಂಬಡ್ತಿ ನೀಡಬೇಕು.

### ಕೋಟೆ ಪಕ್ಕದ ರಾಜಕಾಲುವೆ ಹಾಗೂ ಕೋಟೆ ಅಭಿವೃದ್ಧಿಯ ವಿವಿಧ ಕಾಮಗಾರಿಗಳ ವೀಕ್ಷಣೆ

## ಪುರಾತತ್ವ ಸಾರುವ ಕೋಟೆಗಳ ಸಂರಕ್ಷಣೆ ನಮ್ಮೆಲ್ಲರ ಜವಾಬ್ದಾರಿ –ಎನ್‌ಎಸ್ ಬೋಸರಾಜು

ಜನವಾದಿ ವಾರ್ತೆ

ರಾಯಚೂರು ಜು 7– ನಮ್ಮ ಪೂರ್ವಜರ ಐತಿಹಾಸಿಕ ಕುರುಹುಗಳಾದ ಕೋಟೆ, ಕಂದಕ ಸೇರಿದಂತೆ ಪುರಾತತ್ವ ಸಾರುವ ಶಿಲಾ ಶಾಸನಗಳನ್ನು ಸಂರಕ್ಷಿಸುವುದರ ಜೊತೆಗೆ ಪ್ರವಾಸಿ ತಾಣವನ್ನಾಗಿ ಮಾಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸಚಿವರಾದ ಎನ್‌ಎಸ್ ಬೋಸರಾಜು ಅವರು ತಿಳಿಸಿದರು.



ರಾಯಚೂರಿನ ಐತಿಹಾಸಿಕ ಪುರಾತನ ಸ್ಮಾರಕಗಳ ಸಂರಕ್ಷಣೆಗಾಗಿ ಕೋಟೆ ಪಕ್ಕದ ಕಂದಕ, ರಾಜಕಾಲುವೆ ಅಭಿವೃದ್ಧಿ ಕಾಮಗಾರಿಯನ್ನು ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸಚಿವರಾದ ಎನ್ ಎಸ್ ಬೋಸರಾಜು ಅವರು ಹಾಗೂ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು ಸೇರಿ ಇನ್ನಿತರ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಹಳೆಯ ಜಿಲ್ಲಾಧಿಕಾರಿ ಕಚೇರಿ ಮುಂಭಾಗದ ಒಳಚರಂಡಿ

☛4

## ಶಾಸಕದ್ವಯರಿಂದ ಅಧಿಕಾರಿಗಳಿಗೆ ಮಾನಸಿಕ ಕಿರುಕುಳ – ಕೆ.ಕರಿಯಪ್ಪ



ಜನವಾದಿ ವಾರ್ತೆ

ಸಿಂಧನೂರು ಜು 07 – ಶಾಸಕ ಹಂಪನಗೌಡ ಬಾದರ್ಲಿ ಹಾಗೂ ಪರಿಷತ್ ಶಾಸಕ ಬಸನಗೌಡ ಬಾದರ್ಲಿ ತಮ್ಮ ಸ್ವಾರ್ಥ ಸಾಧನೆಗೆ ಅಧಿಕಾರಿಗಳಿಗೆ ಮಾನಸಿಕ ಕಿರುಕುಳ ನೀಡುತ್ತಿದ್ದು, ವಿರುದ್ದವಾದವರಿಗೆ ವರ್ಗಾವಣೆ, ಅಮಾನತ್ತುಗೊಳಿಸುತ್ತಾ ನವಾಬಗಿರಿ ಆಡಳಿತ ನಡೆಸುತ್ತಿದ್ದಾರೆ ಎಂದು ಬಿಜೆಪಿ ಮುಖಂಡ ಕೆ.ಕರಿಯಪ್ಪ ಆರೋಪಿಸಿದರು.

ಸೋಮವಾರ ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಅವರು ಮಾತನಾಡಿದರು. ಅಧಿಕಾರಿಗಳ ಮೇಲೆ ರಾಜಕೀಯ ಒತ್ತಡ ತಂದು ಮಾನಸಿಕ ಹಿಂಸೆ ನೀಡಲಾಗುತ್ತಿದೆ. ಶಿಷ್ಟಾಚಾರದ ಬಗ್ಗೆ ಮಾತನಾಡುವ ಶಾಸಕ ಹಂಪನಗೌಡ ಬಾದರ್ಲಿ ತಮ್ಮ ಅಧಿಕಾರವಧಿಯಲ್ಲಿ ಶಿಷ್ಟಾಚಾರ ಮರೆತಂತೆ ಕಾಣುತ್ತದೆ. ಸರಕಾರಿ ಯೋಜನೆಗಳ ಉದ್ಘಾಟನೆ, ಭೂಮಿ ಪೂಜೆಗಳನ್ನು ಶಾಸಕ ಬಾದರ್ಲಿ ಅವರ ಸಹೋದರರ ಪುತ್ರರು ಮಾಡುತ್ತಿದ್ದಾರೆ. ತಹಶೀಲ್ದಾರ ಬಳಿ ಶಿಷ್ಟಾಚಾರದ ಬಗ್ಗೆ ದಾಖಲೆಗಳನ್ನು ಕೇಳಿದರೆ ಇಲ್ಲಿಯವರೆಗೆ ನೀಡುತ್ತಿಲ್ಲ ಎಂದು ಆಪಾದಿಸಿದರು.

☛4

## ಪತ್ರಕರ್ತ ಆರ್ ರಾಮು ಕುಟುಂಬಕ್ಕೆ ನೆರವು



ಜನವಾದಿ ವಾರ್ತೆ

ರಾಯಚೂರು ಜು 7– ಕಳೆದ ಮೂರು ದಿನಗಳ ಹಿಂದೆ ನಿಧನರಾದ ಹಿರಿಯ ಪತ್ರಕರ್ತ ಆರ್ ರಾಮು ಕುಟುಂಬಕ್ಕೆ ಯುವ ಕಾಂಗ್ರೆಸ್ ಮುಖಂಡ ರವಿ ಬೋಸರಾಜ್ ನೀಡಿದ ಒಂದು ಲಕ್ಷ ರೂಪಾಯಿ ನೆರವನ್ನು ಕುಟುಂಬಕ್ಕೆ ನೀಡಿ ಸಾಂತ್ವಾನ ಹೇಳಲಾಯಿತು.

ಆರ್ಥಿಕ ಸಂಕಷ್ಟಕ್ಕೆ ಒಳಗಾದ ಪತ್ರಕರ್ತ ಆರ್ ರಾಮ ಕುಟುಂಬಕ್ಕೆ ನೆರವು ನೀಡುವಂತೆ ರವಿ ಬೋಸರಾಜ್ ಅವರಲ್ಲಿ ಸಂಘ ಮನವಿ ಮಾಡಿತ್ತು.

ಈ ಸಂದರ್ಭದಲ್ಲಿ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಆರ್ ಗುರುನಾಥ್, ರಾಜ್ಯ ಸಮಿತಿ ಸದಸ್ಯ ಶಿವಮೂರ್ತಿ ಹಿರೇಮಠ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ ಪಾಷಾ ಹಟ್ಟಿ, ಜಿಲ್ಲಾ ಸಮಿತಿ ಸದಸ್ಯರಾದ ಸಿದ್ದಯ್ಯ ಸ್ವಾಮಿ ಕುಕನೂರು, ಶ್ಯಾಮ ಸುಂದರ ಲಂಗೋಟಿ ಉಪಸ್ಥಿತರಿದ್ದರು.

### ಹಿರಿಯ ಪತ್ರಕರ್ತ ಆರ್.ರಾಮು ನಿಧನ ಪತ್ರಕರ್ತರ ಸಂಘದಿಂದ ಶ್ರದ್ಧಾಂಜಲಿ

## ಪತ್ರಕರ್ತರು ಆರೋಗ್ಯದ ಕಡೆಗೆ ಹೆಚ್ಚು ಗಮನ ಹರಿಸಿ– ಆರ್.ಗುರುನಾಥ

ಜನವಾದಿ ವಾರ್ತೆ

ರಾಯಚೂರು ಜು 7– ಹಿರಿಯ ಪತ್ರಕರ್ತ ಆರ್. ರಾಮು ನಿಧನ ಹಿನ್ನೆಲೆಯಲ್ಲಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಿಂದ ನಗರದ ಪತ್ರಿಕಾ ಭವನದಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಆರ್.ರಾಮು ಭಾವಚಿತ್ರಕ್ಕೆ ಪುಷ್ಪಾರ್ಪಣೆ ಮಾಡಿ ಮೌನಾಚರಿಸಿ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಸಭೆಯಲ್ಲಿ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಆರ್.ಗುರುನಾಥ ಮಾತನಾಡಿ, ಪತ್ರಕರ್ತ ಆರ್. ರಾಮು ಅವರು ಕಳೆದ 25 ವರ್ಷಗಳಿಂದ ವರದಿಗಾರರಾಗಿ ಸೇವೆ ಸಲ್ಲಿಸಿದ್ದಾರೆ.



ಪ್ರಾರಂಭದಲ್ಲಿ ಸ್ಥಳೀಯ ವಾಹಿನಿಯ ಮುಖ್ಯಸ್ಥ ಕ್ಯಾಪ್ಟನ್ ಚೌಧರಿ ಅವರ ಚಾನಲ್‌ನಲ್ಲಿ ಕೆಲಸ ಮಾಡುತ್ತಿದ್ದರು, ಲೋಕಲ್ ಚಾನಲ್‌ನಲ್ಲಿ ಕೆಲಸ ಮಾಡುವ ವೇಳೆ ಎಲ್ಲರ ಪ್ರೀತಿ ವಿಶ್ವಾಸದಿಂದ ಕೆಲಸ ಮಾಡಿದ್ದಾರೆ ಎಂದರು. ನಂತರ ದಿನದಲ್ಲಿ ಪ್ರಜಾ ಪ್ರಸಿದ್ಧ ಪತ್ರಿಕೆಯಲ್ಲಿ ಕೆಲಸ ಮಾಡಿದ್ದರು, ಪತ್ರಕರ್ತರ ಕೆಲಸ ಭದ್ರತೆ ಇಲ್ಲದ ಕೆಲಸವಾಗಿದೆ, ಆರ್.ರಾಮು ಸಹ ಆರೋಗ್ಯ ಸಮಸ್ಯೆಯಿಂದ ಆಸ್ಪತ್ರೆಗೆ ದಾಖಲಾಗಿದ್ದು ಮರಳಿ ಬಾರಲೇ ಇಲ್ಲ. ರಾಮು ಅವರ ಕುಟುಂಬ ಆರ್ಥಿಕ ಸಂಕಷ್ಟದಲ್ಲಿ ಇದೆ. ಇದು ಪತ್ರಕರ್ತರೆಲ್ಲರಿಗೂ ಪಾಠವಾಗಬೇಕಿದೆ ಎಂದರು.

ಅವರು ಆಸ್ಪತ್ರೆಯಲ್ಲಿ ಮೃತಪಟ್ಟಾಗ 1 ಲಕ್ಷ ಹಣದ ಅವಶ್ಯಕತೆ ಇತ್ತು, ಹಣ ಕಟ್ಟಿ ಮೃತದೇಹ ಪಡೆಯಲಾಯಿತು. ಪತ್ರಕರ್ತ ರಾಮು ಕುಟುಂಬದ ಸಂಕಷ್ಟದ ಕುರಿತು ತಿಳಿಸಿದಾಗ ಯುವ ಕಾಂಗ್ರೆಸ್ ಮುಖಂಡ ರವಿ ಬೋಸರಾಜು ನೆರವಿಗೆ ದಾವಿಸಿ 1 ಲಕ್ಷ ರೂ. ನೆರವು ನೀಡಿದ್ದಾರೆ ಎಂದರು. ರಾಮು ಆಸ್ಪತ್ರೆಯ ಚಿಕಿತ್ಸೆ ವೆಚ್ಚ ಭರಿಸಿದ ಶಾಸಕ ಶಿವರಾಜ ಪಾಟೀಲ್ ಅವರಿಗೆ ಧನ್ಯವಾದ ಸಲ್ಲಿಸಿದರು.

ಆರ್.ರಾಮು ಅವರ ಸಾವು ಮನಗೆಲ್ಲಾ ಮನವರಿಕೆ,

☛4

## ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ನೂತನ ಕುಲಪತಿಗಳಿಗೆ ಸ್ವಾಗತ ಕಾರ್ಯಕ್ರಮ

# ಶೈಕ್ಷಣಿಕ ಪ್ರಗತಿಯೇ ವಿಶ್ವವಿದ್ಯಾನಿಲಯದ ನಿಲುವು : ಡಾ.ಶಿವಾನಂದ ಕೆಳಗಿನಮನಿ

**ಜನವಾದಿ ವಾರ್ತೆ**

ರಾಯಚೂರು ಜು 5– ನಿರಂತರ ಕಾರ್ಯದಲ್ಲಿ ತೊಡಗುವ ಮತ್ತು ಸಾಮಾನ್ಯರೊಳಗೆ ಸಾಮಾನ್ಯನಾಗಿ ಕೆಲಸಮಾಡುವ ಸ್ವಭಾವ ನನ್ನದಾಗಿದ್ದು, ವಿಶ್ವವಿದ್ಯಾನಿಲಯವನ್ನು ಕಾಳಜಿ, ಶಿಸ್ತುಬದ್ಧವಾಗಿ, ಶೈಕ್ಷಣಿಕ ಪ್ರಗತಿಯ ಜೊತೆಗೆ ಅಭಿವೃದ್ಧಿಯತ್ತ ಕೊಂಡೊಯ್ಯುವ ಗುರಿಯನ್ನು ಹೊಂದಿದ್ದೇನೆ ಎಂದು ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ನೂತನ ಕುಲಪತಿಗಳಾದ ಡಾ.ಶಿವಾನಂದ ಕೆಳಗಿನಮನಿ ಅವರು ಅಧಿಕಾರ ಸ್ವೀಕರಿಸಿ ಮಾತನಾಡಿದರು.



ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಸಭಾಂಗಣದಲ್ಲಿ ಶನಿವಾರ ಏರ್ಪಡಿಸಿದ್ದ ನೂತನ ಕುಲಪತಿಗಳ ಸ್ವಾಗತ ಸಮಾರಂಭ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇಲ್ಲಿ ಹೊಸ ಮನಸುಗಳಿವೆ, ಕನಸುಗಳನ್ನು ಕಟ್ಟಿಕೊಂಡವರಿದ್ದಾರೆ, ಉತ್ತಮ ಆಲೋಚನೆಗಳನ್ನು ಮಾಡುವವರಿದ್ದಾರೆ ಅವರೊಂದಿಗೆ ನಾನು ಕೈ ಜೋಡಿಸಬಲ್ಲೆ ಎಂಬ ಭರವಸೆಯೊಂದಿಗೆ ನಿಮ್ಮೊಟ್ಟಿಗೆ ನಿಲ್ಲಲು ಬಂದಿದ್ದೇನೆ. ನಾವೆಲ್ಲರೂ ಒಂದೇ ಕುಟುಂಬದವರಾಗಿ ಈ ವಿಶ್ವವಿದ್ಯಾನಿಲಯವನ್ನು ಕಟ್ಟೋಣ, ಮಹರ್ಷಿ ವಾಲ್ಮೀಕಿಯವರ ಹೆಸರು ಚಿರಸ್ಥಾಯಿಯವಾಗಿ ಉಳಿಯಬೇಕು ಆ ನಿಟ್ಟಿನಲ್ಲಿ ನಮ್ಮ ಕೆಲಸಕಾರ್ಯಗಳು ಬೆಳೆಯಬೇಕು ಎಂಬುದು ನನ್ನ ಆಶಯವಾಗಿದೆ. ಗುಂಪುಗಾರಿಕೆ, ರಾಜಕಾರಣ ಮತ್ತು ಜಾತೀಯತೆ ಮಾಡುವವರನ್ನು ನಾನು ನನ್ನ ಹತ್ತಿರ ಸೇರಿಸಿಕೊಳ್ಳುವುದಿಲ್ಲ. ಕೆಲಸಮಾಡುವವರು ಮತ್ತು ಪ್ರತಿಭಾವಂತರಿಗೆ ನಾನು ಶರಣಾಗುತ್ತೇನೆ ಅಂತಹ ಸ್ವಭಾವ ನನ್ನಾಗಿದೆ ಎಂದು ತಮ್ಮ ಹಿತ ನುಡಿಗಳನ್ನಾಡಿದರು.

ವಿಶ್ವವಿದ್ಯಾನಿಲಯದ ಪ್ರಭಾರಿ ಕುಲಪತಿಯಾಗಿದ್ದ ಡಾ.ಸುಯಮೀಂದ್ರ ಕುಲಕರ್ಣಿ ಅವರು ನೂತನ ಕುಲಪತಿಗಳಿಗೆ ಸ್ವಾಗತ ಕೋರುತ್ತಾ ಮಾತನಾಡಿದ ಅವರು, ವಿಶ್ವವಿದ್ಯಾನಿಲಯವು ಇನ್ನೂ ಹೆಚ್ಚಿನ ಮಟ್ಟದಲ್ಲಿ ಅಭಿವೃದ್ಧಿಯತ್ತ ಸಾಗಿಸಲು ನಾವೆಲ್ಲರೂ ನೂತನ ಕುಲಪತಿಗಳ ಆಶಯ ಆದರ್ಶಗಳೊಂದಿಗೆ ಕೈ ಜೋಡಿಸೋಣ ಎನ್ನುತ್ತಾ ಶುಭಹಾರೈಸಿದರು.

ಮಹರ್ಷಿ ವಾಲ್ಮೀಕಿ ವಿವಿಯ ಕುಲಸಚಿವರಾದ ಡಾ.ಚನ್ನಪ್ಪ.ಎ ಕೆ.ಎ.ಎಸ್.(ಸೀನಿಯರ್ ಸೂಪರ್ ಟೈಂ ಸ್ಕೇಲ್)ಮಾತನಾಡಿದ ಅವರು, ಕಳೆದ ಹತ್ತು ವರ್ಷಗಳ ಹಿಂದೆ ಶೈಕ್ಷಣಿಕ ಗುಣಮಟ್ಟ ನೋಡಿದಾಗ, ಇಂದಿನ ಮಕ್ಕಳ ಶಿಕ್ಷಣ ಕಲಿಕೆಯ ಗುಣಮಟ್ಟ ಕಡಿಮೆಯಾಗುತ್ತಿದೆ. ಶೈಕ್ಷಣಿಕವಾಗಿ ಆಲೋಚನೆ ಮಾಡುವಂತಹ ಪ್ರಮುಖ ಕೇಂದ್ರ ಎಂದರೆ ವಿಶ್ವವಿದ್ಯಾನಿಲಯಗಳಾಗಿದ್ದು, ದೊಡ್ಡ ಹೊಣೆಗಾರಿಕೆಯಾಗಿದೆ. ನಮ್ಮ ಮುಂದಿನ ಪೀಳಿಗೆ ಹೇಗಿರಬೇಕು ಎಂದು ರೂಪಿಸುವ ಉದ್ದೇಶವು ನಮ್ಮ ವಿಶ್ವವಿದ್ಯಾನಿಲಯದಿಂದ ಈಡೇರಬೇಕಿದೆ. ಮಹರ್ಷಿ ವಾಲ್ಮೀಕಿ ಅವರ ಜೀವನ ಚರಿತ್ರೆ ಹಾಗೆ ಆ ನಿಟ್ಟಿನಲ್ಲಿ ನಾವೆಲ್ಲರೂ ಸಾಗಬೇಕು. ಶೈಕ್ಷಣಿಕ ಅಭಿವೃದ್ಧಿಯ ಜೊತೆಗೆ ಭೌತಿಕವಾಗಿ ಅಭಿವೃದ್ಧಿ ಕಾಣಬೇಕು. ಸವಾಲುಗಳನ್ನು ಮೆಟ್ಟಿ ವಿಶ್ವವಿದ್ಯಾನಿಲಯವನ್ನು ಒಂದು ಗುಣಮಟ್ಟದ ಚೌಕಟ್ಟಿನಲ್ಲಿ ಕಾಪಾಡಿಕೊಂಡು ಬೆಳೆಸಬೇಕು ಇದಕ್ಕೆ ನಮ್ಮೆಲ್ಲರ ಸಹಕಾರ ಕುಲಪತಿಗಳಿಗೆ ನೀಡೋಣ ಮಾದರಿ ವಿಶ್ವವಿದ್ಯಾನಿಲಯವನ್ನಾಗಿ ನಿರ್ಮಾಣ ಮಾಡೋಣ ಎಂದು ನೂತನ ಕುಲಪತಿಗಳಿಗೆ ಸ್ವಾಗತ ಕೋರುತ್ತಾ ಅವರು ತಿಳಿಸಿದರು.

ವಿ ವಿ ಂ ು ' ು ಕುಲಸಚಿವರು(ಮೌಲ್ಯಮಾಪನ) ಜ್ಯೋತಿ ದಮ್ಮ ಪ್ರಕಾಶ ವೇದಿಕೆ ಮೇಲೆ ಉಪಸ್ಥಿತರಿದ್ದರು. ಕಲಾನಿಕಾಯದ ಡೀನ್ ಪ್ರೊ.ಪಾರ್ವತಿ ಸಿ.ಎಸ್., ವಾಣಿಜ್ಯ ನಿಕಾಯದ ಡೀನ್ ಪ್ರೊ.ಪಿ.ಭಾಸ್ಕರ್, ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕ ಡಾ.ರಾಘವೇಂದ್ರ ಫತ್ತೇಪುರ ಉಪಸ್ಥಿತರಿದ್ದರು.

ವಿವಿಯ ಉಪಕುಲಸಚಿವ ಹಾಗೂ ಹಣಕಾಸು ಅಧಿಕಾರಿ ಡಾ.ಕೆ.ವೆಂಕಟೇಶ್ ಅವರು ನೂತನ ಕುಲಪತಿಯವರನ್ನು ಪರಿಚಯಿಸಿ ಸ್ವಾಗತಿಸಿದರು. ಕನ್ನಡ ಅಧ್ಯಯನ ವಿಭಾಗದ ಅತಿಥಿ ಉಪನ್ಯಾಸಕರಾದ ಡಾ.ಶರಣಪ್ಪ ಛಲುವಾದಿ ನಿರೂಪಿಸಿ ವಂದಿಸಿದರು. ಈ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಡುವ ರಾಯಚೂರು ಮತ್ತು ಯಾದಗಿರಿ ಜಿಲ್ಲೆಯ ಕಾಲೇಜಿನವರು ನೂತನ ಕುಲಪತಿಗಳಿಗೆ ಸ್ವಾಗತಕೋರಿ ಸನ್ಮಾನಿಸಿ ಗೌರವಿಸಿದರು. ವಿಶ್ವವಿದ್ಯಾಲಯದ ಬೋಧಕ–ಬೋಧಕೇತರ ಸಿಬ್ಬಂದಿಗಳು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಹಳೆ ಪಿಂಚಣಿ ಜಾರಿಗಾಗಿ ಜು. 11 ರಂದು ಸಹಿ ಸಂಗ್ರಹ ಸಭೆ




**ಜನವಾದಿ ವಾರ್ತೆ**

ಲಿಂಗಸೂಗೂರು ಜು 7– ಅಖಿಲ ಭಾರತ ರಾಜ್ಯಗಳ ಪಿಂಚಣಿದಾರರ ಒಕ್ಕೂಟವು ಹಳೆ ಪಿಂಚಣಿ ಜಾರಿಗಾಗಿ ರಾಜ್ಯದ ನಿವೃತ್ತಿ ನೌಕರರು ತಮ್ಮಗಳ ಸಹಿಯೊಂದಿಗೆ ಮನವಿ ಪತ್ರವನ್ನು ಜಿಲ್ಲಾಧಿಕಾರಿಗಳು/ ಸಹಾಯಕ ಆಯುಕ್ತರು/ ತಹಶೀಲ್ದಾರರ ಮೂಲಕ ನೇರವಾಗಿ ಗೌರವಾನ್ವಿತ ಪ್ರಧಾನ ಮಂತ್ರಿಗಳಿಗೆ ಸಲ್ಲಿಸಲು ತೀರ್ಮಾನಿಸಿದ್ದು.

ಜು.11ರಂದು ಪಟ್ಟಣದ ಈಶ್ವರ ದೇವಸ್ಥಾನದಲ್ಲಿ ತಾಲೂಕ ಸರಕಾರಿ ನಿವೃತ್ತ ನೌಕರರ ಸಭೆಯನ್ನು ಕರೆಯಲಾಗಿದೆ ಎಂದು ತಾಲೂಕ ಸರಕಾರಿ ನಿವೃತ್ತ ನೌಕರರ ಸಂಘದ ಅಧ್ಯಕ್ಷ ಅಮರೇಶಪ್ಪ ಹೂನೂರು ಹೇಳಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಮಾತನಾಡಿದ ಅವರು ಕೇಂದ್ರ ಸರ್ಕಾರದಿಂದ 2004 ರಲ್ಲಿ ಹೊಸ ಪಿಂಚಣಿಯನ್ನು ಜಾರಿಗೆ ತರಲಾಯಿತು. ಅದೇ ರೀತಿ ದೇಶದ ಎಲ್ಲಾ ರಾಜ್ಯಗಳು ಕೇಂದ್ರ ಸರ್ಕಾರದ ಮಾದರಿಯಲ್ಲಿ ಹೊಸದಾಗಿ ಸರ್ಕಾರಿ ಸೇವೆಗೆ ನೇಮಕಗೊಳ್ಳುವ ನೌಕರರಿಗೆ ಹೊಸ ಪಿಂಚಣಿ ಯೋಜನೆಯನ್ನು ಜಾರಿಗೆ ತರಲಾಗಿದೆ. ಇದರಿಂದ ಸರ್ಕಾರಿ ನೌಕರರು, ನಿವೃತ್ತಿ ಹೊಂದುವ ಸಂದರ್ಭದಲ್ಲಿ ಬರಬೇಕಾದ ಆರ್ಥಿಕ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ. ಹಳೆ ಪಿಂಚಣಿ ಯೋಜನೆಯನ್ನು ಜಾರಿಗೆ ತರಬೇಕೆಂದು ಸಾಕಷ್ಟು ಹೋರಾಟಗಳನ್ನು ಮಾಡಿದರೂ ಸರ್ಕಾರ ಹಳೆ ಪಿಂಚಣಿ ಯೋಜನೆಯನ್ನು ಜಾರಿಗೆ ತಂದಿರುವುದಿಲ್ಲ. ಮುಂದಿನ ದಿನಗಳಲ್ಲಿ ಸರ್ಕಾರಿ ಸೇವೆಯಿಂದ ನೌಕರರು ನಿವೃತ್ತಿ ಹೊಂದಿದಾಗ ಅವರಿಗೆ ಹಳೆ ಪಿಂಚಣಿಯ ಆರ್ಥಿಕ ಸೌಲಭ್ಯಗಳು ದೊರೆಯುವುದಿಲ್ಲ. ನಿವೃತ್ತಿಯಾದ ಸರ್ಕಾರಿ ನೌಕರರಿಗೆ ಮತ್ತು ಕುಟುಂಬ ಪಿಂಚಣಿದಾರರಿಗೆ ಆರ್ಥಿಕ ಸಂಕಷ್ಟವುಂಟಾಗದಂತೆ ಹಳೆ ಪಿಂಚಣಿ ಜಾರಿಗಾಗಿ ಸಭೆಗೆ ಹೆಚ್ಚಿನ ಸಂಖ್ಯೆಯಲ್ಲಿ ತಾಲೂಕಿನ ಸರಕಾರಿ ನಿವೃತ್ತ ನೌಕರರು ಹಾಜರಿದ್ದು, ಸಲ್ಲಿಸಲಿರುವ ಮನವಿ ಪತ್ರಕ್ಕೆ ಸಹಿ ಮಾಡಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಸರ್ಕಾರಿ ಉಪಾಧ್ಯಕ್ಷ ಹಾಜಿ ಮಲಂಗ ಬಾಬಾ, ಹನುಮಂತಪ್ಪ ಮೇಟಿ, ಶರಣಬಸವರಾಜ ನಾಡಗೌಡ್ರ, ಸಹಕಾರಿ ಸಂಘದ ಅಧ್ಯಕ್ಷರು ಎಂ ಜಿ ಹಿರೇಮಠ. ಹಾಗೂ ಸುರೇಶ್ ಕುಲಕರ್ಣಿ ಇದ್ದರು.

# ವಿಜೃಂಭಣೆಯಿಂದ ಜರುಗಿದ ಮುದಗಲ್ ಮೊಹರಂ



**ಜನವಾದಿ ವಾರ್ತೆ**

ಮುದಗಲ್ ಜು 7– ಐತಿಹಾಸಿಕ ಮುದಗಲ್ ಪಟ್ಟಣದ ಹಿಂದೂ ಮುಸ್ಲಿಂ ಭಾವೈಕ್ಯತೆ ಮೊಹರಂ ಹಬ್ಬ ವಿಜೃಂಭಣೆಯಿಂದ ಜರುಗಿತು.

ಕೊನೆಯ ದಿನವಾದ ರವಿವಾರ ಆಲಂ(ದೇವರು)ಗಳನ್ನು ಕಿಲ್ಲಾದ ಹುಸೇನಿ ಆಲಂ ದರ್ಗಾದಿಂದ ಮೆರವಣಿಗೆ ಮುಖಾಂತರ ಕರೆತಂದರೇ, ವೆಂಕಟ–ರಾಯನಪೇಟೆಯಿಂದ ಹುಚ್ಚ ಕಾಸಿಂ ಹಾಗೂ ಶಾಣ್ಯ ಕಾಸಿಂ ದೇವರುಗಳನ್ನು ಬಾಜ–ಬಜೆಂತ್ರಿಗಳೊಂದಿಗೆ, ನಗಾರಿ ಬಾರಿಸುತ್ತಾ ಕೋಟೆಯ ಮುಂಭಾಗದಲ್ಲಿ ಕರೆತರಲಾಯಿತು.

ಪ್ರತಿ ವರ್ಷದಂತೆ ಈ ವರ್ಷವೂ ಕೋಟೆಗೋಡೆಯ ಮುಂಭಾಗದ ಸಿಸಿ ರಸ್ತೆಯಲ್ಲಿ ನಡೆಯುವ ಹಜರತ್ ಹಸನ್–ಹುಸೇನ್‌ರ ಪರಸ್ಪರ ಭೇಟಿಯ ಸಮಯ ಅತ್ಯಂತ ರೋಮಾಂಚನಕಾರಿಯಾಗಿತ್ತು. ಈ ಸಮಯದಲ್ಲಿ ನೆರೆದಿದ್ದ ಲಕ್ಷಾಂತರ ಭಕ್ತರು ಮೊಹರಂ ಹಬ್ಬವನ್ನು ನೋಡಿ ಹಬ್ಬದ ಆಚರಣೆಗೆ ಸಾಕ್ಷಿಯಾದರು. ಆಲಂಗಳ ಪರಸ್ಪರ ಭೇಟಿಯಾಗುತ್ತಿದ್ದಂತೆ ಆಕಾಶದಲ್ಲಿ ಬಣ್ಣ ಬಣ್ಣದ ಪಟಾಕಿಗಳು ಸಿಡಿಸಲಾಯಿತು.

ದೇವರುಗಳ ಮೆರವಣಿಗೆ ಸಮಯದಲ್ಲಿ ಲಿಂಗಸುಗೂರ ಶಾಸಕ ಮಾನಪ್ಪ ವಜ್ಜಲ್, ವಿಧಾನ ಪರೀಷತ್ ಸದಸ್ಯ ಶರಣಗೌಡ ಪಾಟೀಲ್ ಬಯ್ಯಾಪೂರ, ಮಾಜಿ ಮಂತ್ರಿ ಅಮರೇಗೌಡ ಪಾಟೀಲ್ ಬಯ್ಯಾಪೂರ, ಮಾಜಿ ಶಾಸಕ ಡಿ.ಎಸ್.ಹೂಲಗೇರಿ, , ಪುರಸಭೆ ಅಧ್ಯಕ್ಷೆ ಮಹಾದೇವಮ್ಮ ಗುತ್ತೆದಾರ, ಗ್ರಾಮೀಣಾಭೀವೃದ್ಧಿ ಇಲಾಖೆ ಅಪಾರಕಾರ್ಯದರ್ಶಿ ಚಂದ್ರಶೇಖರ ದಫೇದಾರ, ಲಿಂಗಸುಗೂರ ತಹಸೀಲ್ದಾರ ಕುಮಾರಿ ಸತ್ಯಮ್ಮ, ಲಿಂಗಸುಗೂರ ಪೊಲೀಸ ಉಪವಿಭಾಗಾಧಿಕಾರಿ ದತ್ತಾತ್ರೇಯ, ನಾಡತಹಾಶೀಲ್ದಾರ ತುಳುಜರಾಮಸಿಂಗ್, ಪುರಸಭೆ ಮುಖ್ಯಾಧಿಕಾರಿ ಪ್ರವೀಣ ಭೋಗಾರ್, ಉಪಾಧ್ಯಕ್ಷ ಅಜ್ಮೀರ್ ಬೆಳ್ಳಿಕಟ ಬಿಜೆಪಿ ಅಧ್ಯಕ್ಷ ಕರಿಯಪ್ಪ ಯಾದವ್ ಕಾಂಗ್ರೆಸ್ ಅಧ್ಯಕ್ಷ ಶಿವಶಂಕರಗೌಡ ಗೌಡರ, ಯುವ ಅಧ್ಯಕ್ಷ ಅಬ್ದುಲ್ ಖದೀರ್, ಸದಸ್ಯ ಮೈಬುಬಸಾಬ ಕಡ್ಡಿಪುಡಿ,ವಿವಿಧ ಪಕ್ಷಗಳ ಮುಖಂಡರು, ಲಕ್ಷಾಂತರ ಭಕ್ತರು ಇದ್ದರು.

## ಬೀದಿನಾಯಿಗಳು, ದನಗಳ ನಿಯಂತ್ರಣಕ್ಕೆ ಸಾರ್ವಜನಿಕರು ಸಹಕಾರ ನೀಡಬೇಕು:

# ಮಹಾನಗರ ಪಾಲಿಕೆಯ ಆಯುಕ್ತ ಜುಬಿನ್ ಮೋಹಪಾತ್ರ ಮನವಿ



**ಜನವಾದಿ ವಾರ್ತೆ**

ರಾಯಚೂರು ಜು 07 – ರಾಯಚೂರ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬೀದಿ ನಾಯಿಗಳ ಹಾವಳಿಯನ್ನು ನಿಯಂತ್ರಿಸಲು ಸುಮಾರು 24.75 ಲಕ್ಷ ರೂ ಮೊತ್ತದ ಟೆಂಡರ್ ಕರೆದು, ನಾಯಿಗಳ ಸಂತಾನಹರಣ ಶಸ್ತ್ರಚಿಕಿತ್ಸೆಗೆ ಸೂಕ್ತ ಕ್ರಮವಹಿಸಲಾಗುತ್ತಿದೆ ಎಂದು ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೋಹಪಾತ್ರ ಅವರು ಹೇಳಿದರು.

ಜುಲೈ 07ರ ಸೋಮವಾರ ದಂದು ನಗರದ ಹಳೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಹಮ್ಮಿಕೊಳ್ಳಲಾಗಿದ್ದ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಅವರು ಮಾತನಾಡಿದರು.

ಪಾಲಿಕೆ ವ್ಯಾಪ್ತಿಯಲ್ಲಿ ನೈರ್ಮಲ್ಯ ನಿರೀಕ್ಷಕರು ಹಾಗೂ ಮೇಲ್ವಿಚಾರಕರನ್ನು ಒಳಗೊಂಡಂತೆ ಸುಮಾರು 10 ತಂಡಗಳನ್ನು ರಚಿಸಿ ಪ್ರತಿನಿತ್ಯ ವಿವಿಧ ಬಡಾವಣೆಗಳಲ್ಲಿ ಗಸ್ತಿ ನಡೆಸಿ ಬೀದಿ ನಾಯಿಗಳನ್ನು ಬೇರೆಡೆ ಸಾಗಿಸಲು ಕ್ರಮ ವಹಿಸಲಾಗುತ್ತಿದೆ. ಮಂಡ್ಯ ಜಿಲ್ಲೆಯ ಸಂಸ್ಥೆಯೊಂದಕ್ಕೆ ಟೆಂಡರ್ ನೀಡಲಾಗಿದ್ದು, ಸುಮಾರು 1,375 ನಾಯಿಗಳ ಸಂತಾನಹರಣ ಶಸ್ತ್ರಚಿಕಿತ್ಸೆಗೆ ಒಳಪಡಸುವ ಕಾರ್ಯ ನಡೆಸಲಾಗುತ್ತದೆ ಎಂದರು.

ಮುಂದಿನ ದಿನಗಳಲ್ಲಿ ಬೀದಿ ನಾಯಿಗಳ ಸಂಖ್ಯೆಯನ್ನು ಕಡಿಮೆ ಮಾಡುವ ಸಲುವಾಗಿ ವಿಶೇಷ ಕ್ರಮ ವಹಿಸಲಾಗುತ್ತಿದೆ. ನಾಯಿ, ದನ ಹಾಗೂ ಹಂದಿಗಳ ನಿಯಂತ್ರಣಕ್ಕೆ ಸಾರ್ವಜನಿಕರು ಸಹಕಾರ ನೀಡುವ ಮೂಲಕ ರಾಯಚೂರು ನಗರವನ್ನು ಸುಂದರ ಹಾಗೂ ಸ್ವಚ್ಛ ನಗರ ಮಾಡಲು ಸಾಧ್ಯವಿದೆ ಎಂದರು.

ಸಾರ್ವಜನಿಕರು ಘನತ್ಯಾಜ್ಯವನ್ನು ಸರಿಯಾಗಿ ನಿರ್ವಹಣೆ ಮಾಡಬೇಕು. ಪಾಸ್ಟಿಕ್ ಬಳಕೆ ಕಡಿಮೆ ಮಾಡಬೇಕು. ಬಿಡಾಡಿ ದನಗಳನ್ನು ಹಿಡಿಯುವ ಕಾರ್ಯಾಚರಣೆಯು ಪ್ರಾರಂಭವಾಗಿದ್ದು, ಜನರು ಬಿಡಾಡಿ ದನಗಳನ್ನು ಮನಸಿಗೆ ಬಂದಂತೆ ರಸ್ತೆಯಲ್ಲಿ ಬಿಡಬಾರದು. ಈಗಾಗಲೆ 11 ಸಾವಿರ ದಂಢವಿದಿಸಿ ಕೆಲವು ದನಗಳ ಮಾಲೀಕರಿಗೆ ಎಚ್ಚರಿಕೆ ನೀಡಲಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಪಾಲಿಕೆಯ ಆರೋಗ್ಯಾಧಿಕಾರಿ ಡಾ.ಶಾಕೀರ್, ಬಿ.ವೈ.ವಾಲ್ಮೀಕಿ, ಪಶು ವೈದ್ಯಾಧಿಕಾರಿ ಬಸವರಾಜ ಪಾಟೀಲ್, ಪಾಲಿಕೆಯ ಪರಿಸರ ಅಭಿಯಂತರಾರದ ಜೈಪಾಲ ರೆಡ್ಡಿ ಸೇರಿದಂತೆ ಇತರರು ಇದ್ದರು.

## ಜೂನ್ 3ನೇ ವಾರದಲ್ಲಿ 10 ದಿನಗಳ

# ಉದ್ಯಮಶೀಲತಾಭಿವೃದ್ಧಿ ತರಬೇತಿ

**ಜನವಾದಿ ವಾರ್ತೆ**

ರಾಯಚೂರು ಜು 07 – ಇಲ್ಲಿನ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಹಾಗೂ ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ(ಸಿಡಾಕ್), ರಾಯಚೂರು ಇವರ ಸಂಯುಕ್ತಾಶ್ರಯದಲ್ಲಿ ಸ್ವಂತ ಉದ್ಯೋಗವನ್ನು ಸ್ಥಾಪಿಸಲು ಇಚ್ಚಿಸಿದ ಎಲ್ಲಾ ವರ್ಗದ ಮಹಿಳಾ ಹಾಗೂ ಪುರುಷ ಅಭ್ಯರ್ಥಿಗಳಿಗೆ 10 ದಿನಗಳ ಉದ್ಯಮಶೀಲತಾ ಅಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ರಾಯಚೂ–ರಿನಲ್ಲಿ 2025ರ ಜೂನ್ 3ನೇ ವಾರದಲ್ಲಿ ಹಮ್ಮಿಕೊಳ್ಳಲಾಗುತ್ತಿದ್ದು, ಜಿಲ್ಲೆಯ ಆಸಕ್ತ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಈ ತರಬೇತಿಯಲ್ಲಿ ಸ್ವಂತ ಉದ್ಯಮವನ್ನು ಸ್ಥಾಪಿಸಲು ಅನುಸರಿಸಬೇಕಾದ ಕ್ರಮಗಳು, ಉದ್ಯಮಶೀಲತೆಯ ಗುಣಲಕ್ಷಣಗಳು ಸ್ವಂತ ಉದ್ಯೋಗ ಸ್ಥಾಪಿಸಲು ಸರ್ಕಾರದ ಯೋಜನೆಗಳು, ಬ್ಯಾಂಕಿನ ವ್ಯವಹಾರ ಮತ್ತು ಸಾಲ ಸೌಲಭ್ಯಗಳ ಮಾಹಿತಿ ಹಾಗೂ ಸ್ವಯಂ ಉದ್ಯಮಗಳನ್ನು ಸ್ಥಾಪಿಸಲು ಇತ್ಯಾದಿ ವಿಷಯಗಳ ಕುರಿತು ಮಾಹಿತಿಯನ್ನು ನೀಡಲಾಗುವುದು.

ಅಭ್ಯರ್ಥಿಗಳು 18 ವರ್ಷ ದಿಂದ 40 ವರ್ಷ ವಯಸ್ಸಿನವರಾಗಿರಬೇಕು. ಕನಿಷ್ಠ 8 ತರಗತಿ ಓದಿರುವ ಅಭ್ಯರ್ಥಿಗಳು ಜುಲೈ 21 ರೊಳಗಾಗಿ ಮೋಬೈಲ್ ಸಂಖ್ಯೆ: 9986600631, 9986332736ಗೆ ಸಂಪರ್ಕಿಸಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು. ಅಥವಾ ಜಂಟಿ ನಿರ್ದೇಶಕರು, ಸಿಡಾಕ್, ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳ ಕಚೇರಿ ನವೀನ ಆಸ್ಪತ್ರೆ ಪಕ್ಕದಲ್ಲಿ ರಾಯಚೂರು ಇಲ್ಲಿಗೆ ಬಂದು ಅರ್ಜಿ ಸಲ್ಲಿಸಬಹುದಾಗಿದೆ ಎಂದು ಸಿಡಾಕ್ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಯಲಾಟ ಕವಿ ವಾಬಯ್ಯ ಶೆಟ್ಟರು ಅಜರಾಮರ – ಶಾಶ್ವತಸ್ವಾಮಿ ಮುಕ್ಕುಂದಿಮಠ

**ಜನವಾದಿ ವಾರ್ತೆ**

ರಾಯಚೂರು ಜು 7– ಬಯಲಾಟ ಕ್ಷೇತ್ರಕ್ಕೆ ಏಳು ಕೃತಿಗಳನ್ನು ನೀಡಿ ಅದರ ಹಲವು ಮಜಲುಗಳಾದ ಕಥಾ ಸಂಚಾಲಕ, ಹಿನ್ನೆಲೆ ಗಾಯಕ, ಸಾರಥಿ, ನಟ, ನಿರ್ದೇಶಕ ಮತ್ತು ಮೇಲಾಗಿ ಬಯಲಾಟ ಕವಿಯಾಗಿದ್ದ ಮದರಕಲ್ಲಿನ ವಾಬಯ್ಯ ಶೆಟ್ಟಿಯವರು ಎಂದೆಂದಿಗೂ ಅಜರಾಮರವಾಗಿದ್ದಾರೆಂದು ಹಿರಿಯ ಸಾಹಿತಿ ಮತ್ತು ಸಂಶೋಧಕರಾದ ಶಾಶ್ವತಸ್ವಾಮಿ ಮುಕ್ಕುಂದಿಮಠ ಅವರು ಹೇಳಿದರು.



ಅವರಿಂದು ನಗರದ ಕನ್ನಡ ಭವನದಲ್ಲಿ ರಾಯಚೂರು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತಿನ ಸಹಯೋಗದಲ್ಲಿ ಆಯೋಜಿಸಿದ್ದ ಡಾ. ತಿಮ್ಮಯ್ಯ ಶೆಟ್ಟಿ ಇಲ್ಲೂರು ಅವರು ರಚಿಸಿದ ನನ್ನಪ್ಪ ನನ್ನೂರ ದೈವ ಮತ್ತು ಆನೆಗೆ ಅಂಗಿ ತೊಡಿಸಿದ ಅಮ್ಮು ಕೃತಿಗಳನ್ನು ಲೋಕಾರ್ಪಣೆ ಮಾಡಿ ಮಾತನಾಡುತ್ತ ವಾಬಯ್ಯ ಶೆಟ್ಟಿಯವರ ಅಗಾಧವಾದ ಪಾಂಡಿತ್ಯ ಅವರ ಕೃತಿಗಳಲ್ಲಿ ಅನಾವರಣಗೊಂಡಿದ್ದು ಅಂತಹ ಮಹಾನ್ ವ್ಯಕ್ತಿಯ ಬದುಕು ಬರಹದ ಕುರಿತಾಗಿ ಅವರ ಸುಪುತ್ರ ತಿಮ್ಮಯ್ಯ ಶೆಟ್ಟಿ ಇಲ್ಲೂರು ಅವರು ನನ್ನಪ್ಪ ನನ್ನೂರ ದೈವ ಎಂಬ ಸಂಶೋಧನ ಕೃತಿಯ ಮೂಲಕ ಕನ್ನಡ ಸಾರಸ್ವತ ಲೋಕಕ್ಕೆ ಪರಿಚಯಿಸಿರುವ ತಿಮ್ಮಯ್ಯ ಶೆಟ್ಟಿ ಅಭಿನಂದನಾರ್ಹರು ಎಂದರು.

ವಾಬಯ್ಯ ಶೆಟ್ಟಿಯವರು ಕೇವಲ ಮೂರನೇ ತರಗತಿವರೆಗೆ ಓದಿದರೂ ವಿವಿಧ ಗ್ರಂಥಗಳನ್ನು ಅಧ್ಯಯನ ಮಾಡಿ ಸಂಪಾದಿಸಿಕೊಂಡ ಜ್ಞಾನದಿಂದ ಹಳಗನ್ನಡವನ್ನು ನಿರರ್ಗಳವಾಗಿ ಬಳಿಸಿರುವದು ಅವರ ಸಾಹಿತ್ಯ ಕೃತಿಗಳಲ್ಲಿ ಕಾಣುತ್ತದೆ. ಅಂತಹ ಒಬ್ಬ ಅಸಾಧಾರಣ ವ್ಯಕ್ತಿಯ ಕಲಾ ಪ್ರತಿಭೆ ಮತ್ತು ಸಾಹಿತ್ಯದ ಗಟ್ಟಿತನ ಮೆಚ್ಚುವಂತದ್ದಾಗಿದೆ. ಅಂತಹ ಕಲಾ ಪೋಷಕನ ಬದುಕು ಬರಹದ ಕುರಿತು ಅವರ ಸುಪುತ್ರರಾದ ತಿಮ್ಮಯ್ಯ ಶೆಟ್ಟಿಯವರು ರಚಿಸಿದ ನನ್ನಪ್ಪ ನನ್ನೂರ ದೈವ ಕೃತಿಯು ಸಂಶೋಧನಾ ಕೃತಿಯಾಗಿದ್ದು ವಾಬಯ್ಯ ಶೆಟ್ಟಿಯವರ ಜೀವನ, ಬರಹಗಳು ಮತ್ತು ಕ್ಷೇತ್ರಾಧ್ಯಯನದ ಮೂಲಕ ತಮ್ಮ ತಂದೆಯವರ ಕುರಿತಾಗಿ ರಚಿಸಿದ ಕೃತಿಯಾಗಿದೆ ಎಂದು ಸಾಹಿತಿ ಮಂಡಲಗಿರಿ ಪ್ರಸನ್ನ ಹೇಳಿದರು.

ಆನೆಗೆ ಅಂಗಿ ತೊಡಿಸಿದ ಅಮ್ಮು ಮಕ್ಕಳ ಕಥಾ ಸಂಕಲನವನ್ನು ಪರಿಚಯಿಸುತ್ತ ಮಾತನಾಡಿದ ಮಕ್ಕಳ ಸಾಹಿತಿ ಗುಂಡುರಾವ್ ದೇಸಾಯಿ ಇಂದಿನ ದಿನಗಳಲ್ಲಿ ಪುಸ್ತಕ ಓದುವ ಹವ್ಯಾಸ ಕಡಿಮೆಯಾಗಿದ್ದು ಮಕ್ಕಳಿಗೆ ಓದುವ ಹವ್ಯಾಸ ಬೆಳೆಸಬೇಕಾದದ್ದು ಅವಶ್ಯಕವಾಗಿದೆ. ಆ ನಿಟ್ಟಿನಲ್ಲಿ ತಾತ್ಸಾರ ಭಾವನೆಗೆ ಒಳಗಾಗಿದ್ದ ಮಕ್ಕಳ ಸಾಹಿತ್ಯದಲ್ಲಿ ಗಂಭೀರವಾಗಿ ತೊಡಗಿಸಿಕೊಂಡ ತಿಮ್ಮಯ್ಯ ಶೆಟ್ಟಿ ಇಲ್ಲೂರು ಮಕ್ಕಳ ಮನಸ್ಸು ಆಕರ್ಷಿಸುವಂತಹ ಫ್ಯಾಂಟಸಿ ಕಥೆಗಳ ಮೂಲಕ ಮಕ್ಕಳ ಕಥಾ ಲೋಕಕ್ಕೆ ಪ್ರವೇಶಿಸಿದ್ದು ಮೊದಲ ಪ್ರಯತ್ನದಲ್ಲಿಯೇ ಗೆದ್ದಿದ್ದಾರೆ ಎಂದರು. ಈ ಕಥಾ ಸಂಕಲನದಲ್ಲಿ ದೇವರು ಹಚ್ಚಿದ ಲಿಪ್ ಸ್ಟಿಕ್, ಆಕಾಶಕ್ಕೆ ಹಾರಿದ ಅಮ್ಮು, ಶಿವಾನಿ ಮತ್ತು ಫ್ರಿಜ್ ಹಾಗೂ ಆನೆಗೆ ಅಂಗಿ ತೊಡಿಸಿದ ಅಮ್ಮು ಹೀಗೆ ಹದಿನೆಂಟು ಕಥೆಗಳು ವಿಭಿನ್ನವಾಗಿದ್ದು ಹೊಸತನಕ್ಕೆ ತೆರೆದುಕೊಂಡ ಮಕ್ಕಳ ಸಾಹಿತ್ಯದ ಆಶಯದಂತೆ ತಿಮ್ಮಯ್ಯ ಶೆಟ್ಟಿಯವರ ಕಥೆಗಳು ಓದುಗರನ್ನು ಬೇಗ ತಲುಪುವದಲ್ಲದೆ ಬಾಲ್ಯವನ್ನು ನೆನಪಿಸುತ್ತವೆ ಎಂದರು.

ಮುಖ್ಯ ಅತಿಥಿಗಳಾದ ಶಂಕರದೇವರು ಹಿರೇಮಠ. ಕೃತಿಕಾರರಾದ ತಿಮ್ಮಯ್ಯ ಶೆಟ್ಟಿ ಇಲ್ಲೂರು ಮಾತನಾಡಿದರು. ರಾಯಚೂರು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ವೆಂಕಟೇಶ ಬೇವಿನಬೆಂಚಿಯವರು ಅಧ್ಯಕ್ಷತೆವಹಿಸಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಪ್ರಥಮ ದರ್ಜೆ ಗುತ್ತಿಗೆದಾರರಾದ ಸಂಗನಗೌಡ ಮಾಲಿಪಾಟೀಲ ಮದರಕಲ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಮತ್ತು ಸಾಹಿತ್ಯಾಸಕ್ತರು ಉಪಸ್ಥಿತ–ರಿದ್ದರು. ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಕೋಶಾಧ್ಯಕ್ಷರಾದ ಡಾ. ವಿಜಯ ರಾಜೇಂದ್ರ ನಿರೂಪಿಸಿದರು, ಕಾರ್ಯದರ್ಶಿ ರಾವುತ್ ರಾವ್ ಬರೂರ್ ಸ್ವಾಗತಿಸಿದರು ಮತ್ತು ಕುಮಾರಿ ವೈಷ್ಣವಿ ಇಲ್ಲೂರು ಪ್ರಾರ್ಥಿಸಿದರು.


ಕರ್ನಾಟಕ ಸರ್ಕಾರ

**ಪುರಸಭೆ ಕಾರ್ಯಾಲಯ ದೇವದುರ್ಗ**

ತಾ॥ ದೇವದುರ್ಗ ಜಿ॥ ರಾಯಚೂರು

ಸಂ:ಪುಸದೇ/ಕಾಮಗಾರಿ/15 ನೇ.ಹ.ಕ.ಯೋ/ಟೆಂಡರ್/ಪ್ರಕಟಣೆ/2025–26 ದಿನಾಂಕ : 05–07–2025

**ಅಲ್ಪಾವಧಿ ಟೆಂಡರ ಪ್ರಕಟಣೆ (ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಾಲ್ ಮೂಲಕ )**

ಈ ಮೂಲಕ ಪುರಸಭೆ ಮುಖ್ಯಾಧಿಕಾರಿಗಳು ಇವರು ಕರ್ನಾಟಕ ಸಾರ್ವಜನಿಕ ಸಂಗ್ರಾಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999 ಹಾಗೂ ನಿಮಗಳು 2000 ಇ–ಪ್ರೊಕ್ಯೂರಮೆಂಟ್ ಪದ್ಧತಿಯಡಿಯಲ್ಲಿ 15 ನೇ ಹಣಕಾಸು ಯೋಜನೆಯ ಅನುದಾನದಡಿ ತೆಗೆದುಕೊಂಡಿರುವ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಕರೆಯಾಗಿರುತ್ತದೆ.

1) DMA/2025-26/WS/WORK_INDENT43555
2) DMA/2025-26/WS/WORK_INDENT43557
3) DMA/2025-26/OW/WORK_INDENT43554
4) DMA/2025-26/OW/WORK_INDENT40441/CALL-2

ಈ ಮೇಲಿನ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಾಲ್‌ನಲ್ಲಿ ಟೆಂಡರ್ ಕರೆಯಲಾಗಿದ್ದು, ಲೋಕೋಪಯೋಗಿ ಇಲಾಖೆಯ ಸಿವಿಲ್ ಗುತ್ತಿಗೆದಾರರಿಂದ ಕೆ.ಡಬ್ಲ್ಯೂ–1 ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಅಡಿಯಲ್ಲಿ ಈ ಟೆಂಡರನ್ನು ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂಪಮೆಂಟ್‌ನಲ್ಲಿ https://kppp.karnataka.gov.in/ ರ ಮೂಲಕ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್‌ಲೈನ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸತಕ್ಕದ್ದು ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೆಬ್‌ಸೈಟ್ ಹಾಗೂ ತಾಂತ್ರಿಕ ಅಧಿಕಾರಿಗಳನ್ನು ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದು.

1. ಟೆಂಡರ್‌ಗಳನ್ನು ಸಲ್ಲಿಸಲು ಪ್ರಾರಂಭದದ ದಿನಾಂಕ : 05–07–2025 ಸಾಯಂಕಾಲ : 12.12 ರಿಂದ
2. ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 14–07–2025 ಸಾಯಂಕಾಲ 4.00 ರ ವರೆಗೆ

ಸಹಿ/–
ಮುಖ್ಯಾಧಿಕಾರಿಗಳು
ಪುರಸಭೆ ಕಾರ್ಯಾಲಯ
ದೇವದುರ್ಗ

ಸಹಿ/–
ಅಧ್ಯಕ್ಷರು
ಪುರಸಭೆ ಕಾರ್ಯಾಲಯ
ದೇವದುರ್ಗ

# ರಸ್ತೆ ಕಾಮಗಾರಿ; ರಸ್ತೆ ಮಧ್ಯದಿಂದ 50 ಫೀಟ್ ತೆರವುಗೊಳಿಸುವಂತೆ ಒತ್ತಾಯ

ಜನವಾದಿ ವಾರ್ತೆ

ಸಿರವಾರ ಜು 7– ಪಟ್ಟಣದ ಶ್ರೀ ಬಸವೇಶ್ವರ ವೃತ್ತದಿಂದ ದೇವದುರ್ಗ ರಸ್ತೆಯ ನಾಗಡದಿನ್ನಿ ಕ್ರಾಸ್ ವರೆಗಿನ ರಸ್ತೆ ನಿರ್ಮಾಣ ಕಾಮಗಾರಿಗೆ ರಸ್ತೆ ಮಧ್ಯದಿಂದ 50 ಫೀಟ್ ಅಳತೆಯ ರಸ್ತೆ ಅಗಲೀಕರಣ ಮಾಡುವಂತೆ ಒತ್ತಾಯಿಸಿ ಕರ್ನಾಟಕ ರೈತ ಸಂಘದ ವತಿಯಿಂದ ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿಗೆ ಮನವಿ ಸಲ್ಲಿಸಲಾಯಿತು.



ರೂ 2 ಕೋಟಿ 85 ಲಕ್ಷ ಮೊತ್ತದ ರಸ್ತೆ ಕಾಮಗಾರಿಗೆ ರಸ್ತೆ ಮಧ್ಯದಿಂದ ಎರಡು ಬದಿಯಲ್ಲಿ 50 ಫೀಟ್ ರಸ್ತೆ ಅಗಲೀಕರಣ ಮಾಡಿ ಅದರಲ್ಲಿ ಚರಂಡಿ, ಹಾಗು ಮಧ್ಯದಲ್ಲಿ ಡಿವೈಡರ್ ಮಾಡುವ ಕಾಮಗಾರಿ ಇದಾಗಿದೆ. ಈಗಾಗಲೇ ರಸ್ತೆಯ ಅಗಲೀಕರಣ ಪ್ರಾರಂಭವಾಗಿದ್ದು, 50 ಫೀಟ್ ಅಗಲೀಕರಣಕ್ಕೆ ಮಾರ್ಕಿಂಗ್ ಮಾಡಲಾಗಿದೆ. ಅಂಗಡಿ, ಮುಂಗಟ್ಟುಗಳ ಮಾಲೀಕರು ಸೂಚಿತ ಅಳತೆಯ ಪ್ರಕಾರ ತೆರವು ಮಾಡಿರುವುದಿಲ್ಲ. ಕೇವಲ 35–40 ಫೀಟ್ ತೆರವು ಮಾಡಿದ್ದಾರೆ. ಹಗಲಿರುಳು ವಾಹನ ಸಂಚಾರ ಹಾಗು ಜನದಟ್ಟಣೆಯ ರಸ್ತೆ ಇದಾಗಿದ್ದು, 100 ಫೀಟ್ ಅಳತೆಯ ರಸ್ತೆ ಅವಶ್ಯಕತೆ ಇರುತ್ತದೆ. ಕೂಡಲೇ ಸಂಬಂಧಿಸಿದ ಅಂಗಡಿಗಳ ಮಾಲೀಕರಿಗೆ ಸೂಚಿಸಬೇಕು ಎಂದು ಒತ್ತಾಯಿಸಿದರು.

ಸಂಘಟನೆಯು ತಾಲೂಕು ಘಟಕದ ಕಾರ್ಯದರ್ಶಿ ಹುಲಿಗೆಪ್ಪ ಮಡಿವಾಳ,ಹನುಮಂತ ಕುಂಬಾರ,– ಎಚ್ ಕೆ ಬಸವರಾಜ, ಕಾಯಿಪಲ್ಲೆ ದುರುಗಪ್ಪ, ಯಲ್ಲಪ್ಪ, ಸೇರಿದಂತೆ ಇತರರು ಇದ್ದರು.

# ಕವಿತಾಳ ಪಟ್ಟಣಕ್ಕೆ 24*7 ಶಾಶ್ವತ ಕುಡಿಯುವ ನೀರಿಗಾಗಿ ಪ್ರಯತ್ನ– ಸಚಿವ ಎನ್‌ಎಸ್ ಬೋಸರಾಜು

ಜನವಾದಿ ವಾರ್ತೆ

ರಾಯಚೂರು ಜು 7– ಕವಿತಾಳ ಪಟ್ಟಣಕ್ಕೆ ದಿನದ 24*7 ನಿರಂತರ ಕುಡಿಯುವ ನೀರು ಪೂರೈಸಲು ಅಮೃತ್ –2 ಯೋಜನೆಯ 34.50 ಕೋಟಿ ರೂ ವೆಚ್ಚದ ಕುಡಿಯುವ ನೀರಿನ ಸರಬರಾಜು ಕಾಮಗಾರಿಗೆ ಚಾಲನೆ ನೀಡಲಾಗಿದೆ. ಈ ಯೋಜನೆಯ ಕಾಮಗಾರಿಯಿಂದ ಬಹುದಿನದ ಬೇಡಿಕೆಯಾಗಿದ್ದ ಶಾಶ್ವತ ನೀರು ಸರಬರಾಜಿಗಾಗಿ ಪ್ರಯತ್ನಿಸಲಾಗುತ್ತಿದೆ. ಈ ಕಾಮಗಾರಿಯನ್ನು ಅಧಿಕಾರಿಗಳು ತ್ವರಿತಗತಿಯಲ್ಲಿ ಗುಣಮಟ್ಟದೊಂದಿಗೆ ಮುಗಿಸಬೇಕು ಇದಕ್ಕೆ ಸಾರ್ವಜನಿಕರು ಸಹಕರಿಸಬೇಕೆಂದು ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸಚಿವರಾದ ಎನ್ ಎಸ್ ಬೋಸರಾಜು ಅವರು ತಿಳಿಸಿದರು.

ಕವಿತಾಳದಲ್ಲಿ ಆಯೋಜಿಸಿದ್ದ ಕರ್ನಾಟಕ ನಗರ ನೀರು ಸರಬರಾ–ಜಯ ಮತ್ತು ಒಳಚರಂಡಿ ಮಂಡಳಿ ಇಲಾಖೆ ಅನುಷ್ಠಾನದ ಅಮೃತ 2 ಯೋಜನೆಯ ಕಾಮಗಾರಿಗೆ



ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸಚಿವರಾದ ಎನ್ ಎಸ್ ಬೋಸರಾಜು ಹಾಗೂ ಮಾನ್ವಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಹಂಪಯ್ಯ ನಾಯಕ ಅವರು ಜಂಟಿಯಾಗಿ ಭೂಮಿ ಪೂಜೆ ನೆರವೇರಿಸುವ ಮೂಲಕ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದರು.

ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದಲೂ ಜನರಿಗೆ ಅವಶ್ಯವಾಗಿ ಬೇಕಾಗಿರುವ ಕುಡಿಯುವ ನೀರು, ಆರೋಗ್ಯ ಮತ್ತು ಶಿಕ್ಷಣಕ್ಕೆ ಹೆಚ್ಚಿನ ಅನುದಾನವನ್ನು ನೀಡುತ್ತಿದೆ. ಈ ಭಾಗದ ಸಾರ್ವಜನ ಅಭಿವೃದ್ಧಿಗಾಗಿ ನಮ್ಮ ಸರ್ಕಾರ ಸಿದ್ಧವಾಗಿದೆ ಎಂದು ತಿಳಿಸಿದರು.

ಕವಿತಾಳ ಜನತೆಗೆ ಶಾಶ್ವತ ಕುಡಿಯುವ ನೀರು ಕಲ್ಪಿಸಲು ಈ ಯೋಜನೆ ರೂಪಿಸಲಾಗಿದೆ. ಈ ಕುಡಿಯುವ ನೀರಿನ ಯೋಜನೆಯ ಕಾಮಗಾರಿಯನ್ನು ಗುತ್ತೆದಾರರು ಗುಣಮಟ್ಟದೊಂದಿಗೆ ನಿರ್ವಹಿಸಬೇಕು. ಅಧಿಕಾರಿಗಳು ಈ ಕಾಮಗಾರಿಯ ಗುಣಮಟ್ಟವನ್ನು ಪರಿಶೀಲಿಸಬೇಕು.

ಕಾಮಗಾರಿ ನಿರ್ವಾಹಣೆಯ ಸಂದರ್ಭದಲ್ಲಿ ಬಡಾವಣೆಯ ಜನಗಳು ಕಾಮಗಾರಿಗೆ ಸಹಕರಿಸಬೇಕು. ನೀವು ಸಹಕರಿಸಿದಾಗ ಮಾತ್ರ ಈ ಕುಡಿಯುವ ನೀರಿನ ಕಾಮಗಾರಿ ಬೇಗ ಮುಗಿಯಲಿದೆ ಎಂದು ತಿಳಿಸಿದರು.

ನಂತರ ಶಾಸಕರಾದ ಹಂಪಯ್ಯ ನಾಯಕ ಮಾತನಾಡಿ, ನಮ್ಮೆಲ್ಲರ ಬಹುದಿನದ ಬೇಡಿಕೆಯಾಗಿದ್ದ ಕವಿತಾಳ ಪಟ್ಟಣದ ಶಾಶ್ವತ ಕುಡಿಯುವ ನೀರು ಕನಸು ಈ ಅಮೃತ 2 ಯೋಜನೆಯ ಮೂಲಕ ನೆರವೇರಲಿದೆ. ಈ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಮುಗಿಸಬೇಕೆಂದು ಅಧಿಕಾರಿಗಳಿಗೆ ತಿಳಿಸಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಕಿರಲಿಂಗಪ್ಪ ಕವಿತಾಳ, ಕೆ ಶಾಂತಪ್ಪ, ಯುವ ಮುಖಂಡರಾದ ಬ್ರಿಜ್ಜೇಶ ಪಾಟೀಲ್, ಮಾಜಿ ಜಿಪಂ ಸದಸ್ಯ ಮಾಳಪ್ಪ, ಜಿ ಶಿವಮೂರ್ತಿ, ವೆಂಕಟರಾವ್ ದಾವಣಗೆರೆ, ಕರಿಯಪ್ಪ ಮಡಿವಾಳ, ಅಧ್ಯಕ್ಷರಾದ ಕಾಸಿಂಬೀ ಚಾಂದ್ ಪಾಷ, ಎಲಿಜಾ ಓವಣ್ಣ, ರಾವಿವಿ ಆಡಳಿತ ಮಂಡಳಿ ಸದಸ್ಯರಾದ ಶಿವಣ್ಣ ವಕೀಲ್, ಫರಿದುಲ್ಲಾ ಇನಾಂದಾರ, ಬಸವರಾಜ ಪಾಟೀಲ್, ಮಲ್ಲಿಕಾರ್ಜುನಗೌಡ, ಮೌನೇಶ ಕಟ್ಟಿಮನಿ, ಸುರೇಶ ರೆಡ್ಡಿ, ರಾಘವೇಂದ್ರ ಶೆಟ್ಟಿ, ಶೇಖರಪ್ಪ ಸಾಹುಕಾರ ಹಟ್ಟಿ, ರಾಜೇಶ ಬನ್ನಿಗಿಡದ್,ಕರಿಯಪ್ಪ ಅಡ್ಡೆ, ಸಾಹುಕಾರ, ಯಲ್ಲಪ್ಪ ಮಾಡಿಗೇರಿ, ಗಂಗಪ್ಪ ದಿನ್ನಿ, ಹನುಮಂತ ಬುಳ್ಳಾಪುರ, ಅಲ್ಲಮಪ್ರಭು, ಪರಶುರಾಮ, ಹನುಮಂತ ಅರಿಕೇರಿ, ಅಯ್ಯಪ್ಪ, ಅಧಿಕಾರಿಗಳು ಸೇರಿದಂತೆ ಅನೇಕರಿದ್ದರು.

# ಗುರುಪೌರ್ಣಿಮೆ ಅಂಗವಾಗಿ ಶ್ರೀ ನಿಜಾನಂದ ಯೋಗಾಶ್ರಮದ ಶ್ರೀಗಳಿಂದ 21 ದಿನಗಳ ಮೌನಾನುಷ್ಠಾನ

ಸಾವಿರಾರು ಭಕ್ತಗಣ ಇದ್ದರೂ ಆಡಂಬರ ಇಲ್ಲದ, ವೈಭವಿಕರಣದ ಬಟ್ಟೆಗಳಾಗಲಿ, ಬೆಳ್ಳಿ ಬಂಗಾರಗಳಾಗಲಿ ಧರಿಸದೆ, ಊಟ ನಿದ್ದೆಗಳ ಪರಿವಿಲ್ಲದೆ ಹಗಲಿರುಳು ಜನರ ಬದುಕಿನ ಚಿಂತೆಗಳಿಗೆ ತಮ್ಮ ಚಿಂತನೆಗಳ ಮೂಲಕ ಬಿದ್ದ ಜನರನ್ನು ತಿದ್ದುವ ಮೂಲಕ ತಾಲೂಕಿನಲ್ಲಿ ಜನರ ಭಕ್ತಿಯ ಪ್ರೀತಿಗೆ ಪಾತ್ರರಾದವರು ಶ್ರೀ ಗುರುಬಸವ ರಾಜಗುರುಗಳು.

ಹೌದು ಇದು ದೇವದುರ್ಗ ತಾಲ್ಲೂಕಿನ ಮಲದಕಲ್ ಗ್ರಾಮದಲ್ಲಿರುವ ಶ್ರೀ ನಿಜಾನಂದ ಯೋಗಾಶ್ರಮದ ಪೀಠಾಧಿಪತಿಗಳಾದ ಶ್ರೀ ಗುರುಬಸವ ರಾಜಗುರುಗಳ ವೈಶಿಷ್ಟತೆ.

ಕಳೆದ ಹತ್ತು ವರ್ಷಗಳಿಂದ ದೇವದುರ್ಗ ತಾಲೂಕಿನ ಮಲದಕಲ್ ಗ್ರಾಮದ ಹೊರವಲಯದಲ್ಲಿ ಸುಂದರ ಪರಿಸರದಲ್ಲಿ ಶ್ರೀ ಗುರು ಬಸವ ರಾಜಗುರುಗಳ ದಿವ್ಯ ಸಾನಿಧ್ಯದಲ್ಲಿ ಸ್ಥಾಪಿತವಾಗಿರುವ ಶ್ರೀ ನಿಜಾನಂದ ಯೋಗಾಶ್ರಮವು ಗ್ರಾಮೀಣ ಪ್ರದೇಶದಲ್ಲಿ ಸದ್ದಿಲ್ಲದೇ ಸುದ್ದಿ ಮಾಡುತ್ತಿದೆ.

ಈ ಯೋಗಾಶ್ರಮಕ್ಕೆ ಬರುವ ಭಕ್ತಾದಿಗಳು ಶ್ರೀ ನಿಜಾನಂದ ಸ್ವಾಮಿಗಳಿಗಾಗಲಿ, ದೇವಿಗಾಗಲಿ ತೆಂಗಿನಕಾಯಿಗಳನ್ನು , ಹೂವು ಹಣ್ಣುಗಳನ್ನು ತರಲೇಬೇಕೆಂಬ ನಿಯಮವನ್ನು ಕಡಿಮೆಗೊಳಿಸಿ ಆಶ್ರಮದಲ್ಲಿ ಸ್ಥಾಪಿತವಾದ ಶಾಲೆಯ ಬಡ ವಿದ್ಯಾರ್ಥಿಗಳಿಗೆ ಪಠ್ಯ– ಪುಸ್ತಕಗಳನ್ನು ಅರ್ಪಿಸುವ ಪದ್ಧತಿಗೆ ಹೆಚ್ಚಿನ ಒತ್ತು ಕೊಡುವ ಮೂಲಕ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಶಿಕ್ಷಣಕ್ಕೆ ಹೆಚ್ಚಿನ ಮಹತ್ವವನ್ನು ಕೊಡುವ ಶ್ರೀ ಗುರುಬಸವ ರಾಜಗುರುಗಳು ಈ ಭಾಗದ ಶೈಕ್ಷಣಿಕ ಅಭಿವೃದ್ಧಿಗೆ ಶ್ರಮವಹಿಸಿದರ ಫಲದಿಂದ ಇಂದು ಈ ಯೋಗಾಶ್ರಮದಲ್ಲಿ ಸುಮಾರು 350 ಕ್ಕೂ ಹೆಚ್ಚಿನ ಮಕ್ಕಳು ಅತ್ಯಂತ ಕಡಿಮೆ ಖರ್ಚಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ.






ಈ ಮಠದ ಮತ್ತೊಂದು ವೈಶಿಷ್ಟತೆ ಏನೆಂದರೆ, ಯಾವುದೇ ರೀತಿಯ ಜಾತಿಯ ಭೇದಭಾವ ಮಾಡದೆ ಸರ್ವರೂ ಸಮಭಾವದ ಕಲ್ಪನೆಯಲ್ಲಿ ಬದುಕಬೇಕೆಂಬ ಧ್ಯೇಯದಿಂದ ಶ್ರೀ ಗುರು ಬಸವ ರಾಜಗುರುಗಳು ಗುರುಗಳು, ಜನರಿಗೆ ಗುರುದೀಕ್ಷೆಯನ್ನು ನೀಡುವುದರ ಜೊತೆಗೆ ಭಕ್ತರಿಗೆ ಸನ್ಮಾರ್ಗದತ್ತ ಕೊಂಡೊಯ್ಯುತ್ತಾರೆ.

ಗುರು ಪೌರ್ಣಿಮೆಯ ಮೊದಲು ಆಷಾಢ ಮಾಸದ ಸಂದರ್ಭದಲ್ಲಿ ಯೋಗಾಶ್ರಮಲ್ಲಿ 21 ದಿನಗಳವರೆಗೆ ಮೌನ ಅನುಷ್ಠಾನ ಮಾಡುವ ಶ್ರೀ ಗುರುಗಳು

ಗುರು ಪೂರ್ಣಿಮೆಯಂದು ಪುರ ಪ್ರವೇಶಿಸಿ ಆಗಮಿಸಿದ ಸಾವಿರಾರು ಭಕ್ತಾದಿಗಳಿಗೆ ಗುರುಭಕ್ತಿಯ ಮಾರ್ಗದರ್ಶನ ಮಾಡುತ್ತಾ ಅರ್ಶಿವಚನ ನೀಡುತ್ತಾರೆ.

ಶ್ರೀ ನಿಜಾನಂದ ಯೋಗಾಶ್ರಮ ಮಲದಕಲ್‌ನಲ್ಲಿ ಶ್ರೀ ಗುರುಬಸವ ರಾಜಗುರುಗಳು ಪ್ರತಿ ವರ್ಷದ ಪದ್ದತಿಯಂತೆ ಆಷಾಢ ಮಾಸದ ನಿಮಿತ್ಯ ಕೈಗೊಂಡಿರುವ 21 ದಿನಗಳ ಮೌನಾನುಷ್ಠಾನವು ಗುರುಪೂರ್ಣಿಮೆಗೆ ಮುಕ್ತಾಯಗೊಳ್ಳಲಿದ್ದು ದಿನಾಂಕ 10/7/25 ಬುಧುವಾರ ಬೆಳಿಗ್ಗೆ 6 ಗಂಟೆಯಿಂದ ಆಶ್ರಮದಲ್ಲಿ ರುದ್ರಾಭಿಷೇಕ, ಹೋಮ, ಅಷ್ಟೋತ್ತರ ಬಿಲ್ವಾರ್ಚನೆ, ನಂತರ ಶ್ರಿಗುರುಗಳ ಸ್ವಾಗತೋತ್ಸವ, ಹರಕೆ ಹೊತ್ತ ಭಕ್ತರಿಂದ, ಹಾಗೂ ಶಿಷ್ಯರಿಂದ ಹದಿನೈದು ತುಲಾಭಾರ, ಮತ್ತು ವೈಭವದ ಗುರುಪಾದಪೂಜೆ ನಡೆದುಕೊಂಡು ಮಹಾಪ್ರಸಾದದೊಂದಿಗೆ ಮಧ್ಯಾಹ್ನ 2 ಗಂಟೆಗೆ ಕಾರ್ಯಕ್ರಮ ಮಹಾಮಂಗಲಗೊಳ್ಳಲಿದೆ.

ಗುರುಪೂರ್ಣಿಮೆ ಕಾರ್ಯಕ್ರಮವನ್ನು ನಮ್ಮ ಭಾಗದಲ್ಲಿ ಮೊಟ್ಟಮೊದಲು ಪ್ರಾರಂಭ ಮಾಡಿದ ಕೀರ್ತಿ ಶ್ರೀ ಗುರುಗಳಿಗೆ ಸಲ್ಲುತ್ತದೆ.

ಜಾತಿ ಭೇದಗಳಿಲ್ಲದ ಅಜಾತ ಶ್ರೀ ಗುರುಗಳೆಂಬ ಹೆಗ್ಗಳಿಕೆ ಗುರುಗಳದ್ದು.

ಅನ್ನ, ಆರೋಗ್ಯ, ಅರಿವು,ಗಳ ತಾಣವಾಗಿರುವ ಆಶ್ರಮವು ಸಾವಿರಾರು ಜನರನ್ನ ವ್ಯಸನ ಮುಕ್ತ ಮಾಡಿ ಬಡವರ ಬಾಳಬದುಕು ಬಂಗಾರಮಾಡಿದೆ.

ತಮ್ಮ ನೇರ ನಡೆ ನುಡಿಗಳಿಂದ ಜನರಲ್ಲಿರುವ ಮೂಢನಂಬಿಕೆ ಗಳನ್ನು ತೊಲಗಿಸಿ ಜ್ಞಾನದ ಹಾದಿಯಲ್ಲಿ ಸಾಗಿಸುವ ಗುರುಗಳು ಈ ಭಾಗದಲ್ಲಿ ಹಿಂದುಳಿದ ಜನರಿಗೆ ಭಾಗ್ಯದ ಬೆಳಕಾಗಿದ್ದಾರೆ.

ಸಾವಿರಾರು ಭ್ಕ್ತರ, ಶಿಷ್ಯರ ಸಮಾಗಮದೊಂದಿಗೆ ಗುರುಗಳ ವೈಭವದ ಅರ್ಥವತ್ತಾದ ಕಾರ್ಯಕ್ರಮವು ಗುರುಪೂರ್ಣಿಮೆಗೆ ಸಾಕ್ಷಿಯಾಗಲಿದೆ.

**– ಡಾ.ಮಾರುತಿ ಕುಮಾರ ಮಲದಕಲ್**
ಸಹಾಯಕ ಪ್ರಾಧ್ಯಾಪಕರು.

# ಜುಲೈ 14ರಂದು ತ್ರೈಮಾಸಿಕ ಕೆಡಿಪಿ ಸಭೆ

ಜನವಾದಿ ವಾರ್ತೆ

ರಾಯಚೂರು ಜು 07– ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ ಹಾಗೂ ಜೀವನೋಪಾಯ ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಶರಣ ಪ್ರಕಾಶ್ ಆರ್.ಪಾಟೀಲ್ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಪಂಚಾಯತ್ ಕಚೇರಿ ಸಭಾಂಗಣದಲ್ಲಿ ಜುಲೈ 14ರ ಬೆಳಗ್ಗೆ 11 ಗಂಟೆಗೆ ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆ ನಡೆಯಲಿದೆ.
ಪ್ರಗತಿ ಮಾಹಿತಿಯೊಂದಿಗೆ ಜಿಲ್ಲಾ ಮಟ್ಟದ ಅಧಿಕಾರಿಗಳು ಸಭೆಗೆ ಕಡ್ಡಾಯ ಹಾಜರಾಗುವಂತೆ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜನವಾದಿ
ಜಾಹೀರಾತಿಗಾಗಿ ಸಂಪರ್ಕಿಸಿ:
9448300139

# ಹುಸೇನಿ ಆಲಂ ಪಿರಲದೇವರ ದರ್ಶನ ಪಡೆದ ಸಚಿವ ಎನ್.ಎಸ್.ಬೋಸರಾಜು

ಜನವಾದಿ ವಾರ್ತೆ

ಮಾನ್ವಿ ಜು 7– ಪಟ್ಟಣದಲ್ಲಿ ಕೋನಾಪುರ ಪೇಟೆಯಲ್ಲಿನ ಮಸಿದಿಯಲ್ಲಿ ಮೋಹರಂ ಅಂಗವಾಗಿ ಹುಸೇನಿ ಆಲಂ ಸೇರಿದಂತೆ ಇತರ 7 ಅಲಂ ಪಿರಲದೇವರುಗಳನ್ನು ರಾಜ್ಯ ಸಣ್ಣ ನೀರಾವರಿ ಹಾಗೂ ವಿಜ್ಞಾನ ತಂತ್ರಜ್ಞಾನ ಸಚಿವರಾದ ಎನ್.ಎಸ್. ಬೋಸರಾಜು ಸಂದರ್ಶಿಸಿ ದರ್ಶನ ಪಡೆದು ಕೊಂಡು ಮಾತನಾಡಿ ಮಾನ್ವಿ ನಗರದಲ್ಲಿ ಹಿಂದು ಮತ್ತು ಮುಸ್ಲಿಂ ಸಮುದಾಯಗಳು ಸೌಹಾರ್ದಯುತವಾಗಿ ಸಾಮಾರಸ್ಯದಿಂದ ಜೀವನವಾಡುವುದನ್ನು ಕಾಣಬಹುದು. ಮೊಹರಂ ಹಬ್ಬ ಭಾವೈಕ್ಯತೆಯ ಹಬ್ಬವಾಗಿದೆ ಎಂದು ತಿಳಿಸಿದರು.



ಶಾಸಕ ಹಂಪಯ್ಯನಾಯಕ, ಗ್ಯಾರಂಟಿ ಸಮಿತಿಯು ತಾ.ಅಧ್ಯಕ್ಷರಾದ ಬಿ.ಕೆ.ಅಮರೇಶಪ್ಪ, ನಜುರುದ್ದೀನ್ ಖಾದ್ರಿ , ಸೈಯದ್ ಖಾಲಿದ್ ಖಾದ್ರಿ, ರಾಜಾ ಸುಭಾಷ್ ಚಂದ್ರ ನಾಯಕ, ಸೂರ್ಯನಾರಾಯಣ ಯಾದವ, ನಜರುದ್ದಿನಿ ಖಾದ್ರಿ,ಸಾಬೀರ ಪಾಷ,ಸತ್ತಾರ ಬಂಗ್ಲೆವಾಲ ಸೇರಿದಂತೆ ಇನ್ನಿತರರು ಇದ್ದರು.

# ಜನಜಾಗರಣ ಪ್ರತಿಭಟನಾ ಪಾದಯಾತ್ರೆ ಜುಲೈ 8, 2025ರ ಪ್ರಸ್ತುತತೆ

ಜುಲೈ 8, 2025 ಯಾದಗಿರಿ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡಬಹುದಾದ ಐತಿಹಾಸಿಕ ದಿನ. ಯಾದಗಿರಿ/ಕಲಬುರ್ಗಿಯ ಶ್ರೀರಾಚೋಟಿ ವೀರಣ್ಣ ಭಕ್ತರು ಸೇರಿದಂತೆ ಸಮಸ್ತ ಹಿಂದೂ ಬಾಂಧವರು ಅದರಲ್ಲೂ ಜಾಗೃತ ಪ್ರಜೆಗಳು ಸರ್ಕಾರದ ಅರ್ಥಾತ್ ಪ್ರಜೆ ಗಳ ಸಂಪತ್ತಿನ ರಕ್ಷಣೆಗಾಗಿ ಜನಜಾಗೃತಿ ಪ್ರತಿಭಟನಾ ಪಾದಯಾತ್ರೆಗೆ ಮುಂದಾದ ಅವಿ ಸ್ಮರಣೀಯ ದಿನವಾಗಲಿದೆ. ಭಕ್ತರ ಜನಾಗೃತಿ ಪ್ರತಿಭಟನಾ ಪಾದಯಾತ್ರೆಯು ದೇವಸ್ಥಾನದ ರಕ್ಷಣೆಯ ಹೋರಾಟವಾಗಿದ್ದರಿಂದ ಧಾರ್ಮಿಕ ಹೋರಾಟ, ಗುಡ್ಡದ ರಕ್ಷಣೆಯ ಹೋರಾಟ ವಾಗಿದ್ದರಿಂದ ಪರಿಸರ ರಕ್ಷಣೆಯ ಹೋರಾಟ, ಸರ್ಕಾರದ ಆಸ್ತಿ ರಕ್ಷಿಸಿಕೊಳ್ಳಿ ಎಂಬ ಕಾರಣ ದಿಂದ ನಾಗರೀಕ ಪ್ರಜ್ಞೆಯ ನಾಗರೀಕ ಜವಾಬ್ದಾರಿಯ ನಿರ್ವಹಣೆಯ ಹೋರಾಟವಾಗಿದೆ. ಪ್ರಯಾಗದ ತ್ರಿವೇಣಿ ಸಂಗಮದಲ್ಲಿ ಮಿಂದು ಎದ್ದ ಪುಣ್ಯ ಜನಾಗೃತಿ ಪ್ರತಿಭಟನಾ ಪಾದ ಯಾತ್ರೆಯುಲ್ಲಿ ಭಾಗವಹಿಸುವುದರಿಂದ, ಬೆಂಬಲಿಸುವುದರಿಂದ ಲಭಿಸುತ್ತದೆ.

ಡಾ ಅಂಬೇಡ್ಕರವರ ರಚಿತ ಸಂವಿಧಾನದಲ್ಲಿ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳು ಪ್ರಭುಗಳು. ಸಂವಿಧಾನಾತ್ಮಕ ಸಂಸ್ಥೆಗಳು, ನಿಯಮಗಳು ಎಲ್ಲವೂ ಪ್ರಜೆಗಳ ಕ್ಷೇಮಕ್ಕಾಗಿ, ಮೂಲಭೂತ ಹಕ್ಕುಗಳ ರಕ್ಷಣೆಗಾಗಿ ಇವೆ. ಆದರೂ ಅನೇಕ ಸಂದರ್ಭಗಳಲ್ಲಿ ಪ್ರಜೆಗಳ ನಾಗರೀಕ ಹಕ್ಕುಗಳ ಕಡೆಗಣನೆ ಆಗುತ್ತಿದೆ. ಇದಕ್ಕೆ ಜೀವಂತ ಸಾಕ್ಷಿ ಸರ್ಕಾರಿ ಜಾಗದ ರಕ್ಷಣೆಗಾಗಿ ಮಾಡುತ್ತಿರುವ ಮನವಿಗಳಿಗ ಸೂಕ್ತವಾಗಿ ರಚನಾತ್ಮಕವಾಗಿ ಸ್ಪಂದಿಸದಿರುವುದು. ಜಿಲ್ಲಾಡಳಿತ ಪ್ರಜೆಗಳ ಮನವಿಗೆ ರಚನಾತ್ಮಕವಾಗಿ ಸ್ಪಂದಿಸದಿರುವುದರಿಂದ ಹೋರಾಟ ಅನಿವಾರ್ಯ ವಾಗಿದೆ. ಗ್ರಾಮ ನಗರ ತಾಲ್ಲೂಕ ಆಡಳಿತಕ್ಕೆ ಮೇಲ್ಪಂಕ್ತಿಯಾಗ ಬೇಕಾಗಿದ್ದ ಜಿಲ್ಲಾಡಳಿತ ಜಾಣ ಮೌನ ತೋರಿದೆ. ಅರ್ಜಿಗಳ ತೀವ್ರ ವಿಲೇವಾರಿಗಾಗಿ ರಾಜ್ಯ ಸರ್ಕಾರ ಸಕಾಲ ಜಾರಿಗೆ ತಂದಿದ್ದರೂ ಪಬ್ಲಿಕ್‌ನ ನ್ಯಾಯಯುತ ಬೇಡಿಕೆಯನ ವಿವಿದ ಹಂತಗಳ ಹುದ್ದೆ ಯಲ್ಲಿದ್ದ 'ನ ಪಬ್ಲಿಕ್ ಸರ್ವೆಂಟ್ಸ್ ರವರು ಪರಿಣಾಮಕಾರಿಯಾಗಿ ಅನ್ವಯಿಸಿಲ್ಲ ಎಂಬುದು ಸಹ ತಾನಾಗಿ ಅನಾವರಣವಾಗಿದೆ.

ಜಾಗೃತ ಪ್ರಜೆಗಳು ತಮ್ಮ ಬೇಡಿಕೆ ರಚನಾತ್ಮಕವಾಗಿ ಈಡೇರಿಸಲು ಜನಜಾಗೃತಿ ಪ್ರತಿಭಟನಾ ಪಾದಯಾತ್ರೆಯ ಮೂಲಕ ಜಿಲ್ಲಾಡಳಿತವನ್ನು ಒತ್ತಾಯಿಸುತ್ತಾರೆ. ಪೂಜ್ಯ ಸ್ವಾಮಿಗಳು, ಸಾಮಾಜಿಕ, ಧಾರ್ಮಿಕ ಮುಖಂಡರು, ಭಕ್ತರು ಎಲ್ಲರೂ ಭಾಗವಹಿಸುವ ಪಾದಯಾತ್ರೆಯಲ್ಲಿ ಕ್ರೀಯಾಶೀಲ ಹಿಂದುಗಳು ಭಾಗವಹಿಸಬೇಕು. ಯಾರೂ ಕರೆಯದೇ, ಯಾರಿಗಾಗಿ ಕಾಯದೇ, ಬಂದರೆ ಜೊತೆಯಾಗಿ ಬರದಿದ್ದಲ್ಲಿ ಏಕಾಂಗಿಯಾಗಿ, ಪಂಥ ಪಂಗಡ ಭಾಷೆ ಪ್ರದೇಶ ಇತ್ಯಾದಿ ಬೇಧ ಬದಿಗಿರಿಸಿ ಕುಂಭಮೇಳದಲ್ಲಿ ಭಾಗವಹಿಸಿ ಧನ್ಯತ ಪಡೆದವರು ಕೋಟಿ ಕೋಟಿ ಜನ ಭಕ್ತರು ಶ್ರದ್ಧಾಳುಗಳು. ಅದೇ ರೀತಿ ಯಾದಗಿರಿಯ ಶ್ರೀ ರಾಚೋಟಿ ವೀರಣ್ಣ ಬೆಟ್ಟದ ಉಳಿವಿಗಾಗಿ ಧರ್ಮ ಪ್ರಕೃತಿ ಮತ್ತು ನಾಗರೀಕ ಹಕ್ಕುಗಳ ತ್ರಿವೇಣಿ ಸಂಗಮದ ರೀತಿಯ ಹೋರಾಟದಲ್ಲಿ ಭಾಗವಹಿಸಿ ದೇವ ಋಣ ತೀರಿಸಲು ಇರುವ ಸದಾವಕಾಶ ಮನೆಬಾಗಿಲಿಗೆ ಬಂದಿದೆ. ಬಂಧು ಬಳಗ ಮಿತ್ರರು, ಹಾಗೂ ಪರಿಚಯಿಸ್ಥರ ಜೊತೆ ಜುಲೈ 8, 2025 ಬೆ.10ಕ್ಕೆ ಯಾಧಗಿರಿಯ ಯಾದಗಿ–ರಿಯ ಹಿಂದೂ ಸಮಸ್ತ ಪಂಥ ಪಂಗಡಗಳ ಬಾಂಧವರು ಎಲ್ಲ ಸದ್ಭಕ್ತರು ಶ್ರೀ ಲಕ್ಷ್ಮೀಗುಡಿಗೆ ಒಂದಾಗಿ ಒಟಾಗಿ ಬನ್ನಿ.

**ಯಾದಗಿರಿ ಶ್ರೀ ರಾಚೋಟಿ ವೀರಣ್ಣ ದೇವಾಲಯ ಮತ್ತು ಗುಡ್ಡದ ರಕ್ಷಣೆಗಾಗಿ ಬನ್ನಿ**

ಯಾದಗಿರಿಯ ಶ್ರೀ ರಾಚೋಟಿ ವೀರಣ್ಣ ಯಾದಗಿ–ರಿಯ ಗ್ರಾಮ ದೇವತೆ. ಪೌರಾಣಿಕ, ಐತಿಹಾಸಿಕ, ಪುರತಾನ ಪರಂಪರೆಗೆ ಕೊಂಡಿಯಂತಿರುವ ದೇವಾಲಯವಾಗಿದೆ. ಉತ್ತರ ಕರ್ನಾಟಕದ ದೇವಾಲಯಗಳನ್ನು ವಾಸ್ತುಶಿಲ್ಪದ ದೃಷ್ಟಿಯಿಂದ ಅಧ್ಯಯನ ಮಾಡಬೇಕು. ವಾಡಿ ರಸ್ತೆಯಿಂದ ಯಾದಗಿರಿ ನಗರದ ಪ್ರವೇಶ ಮಾಡುವ ಸಿಗು ಕರಿಕಲ್ಲಿನ ಗುಡ್ಡದಲ್ಲಿ ಭೂಮಿಯಿಂದ 200 ಅಡಿ ಎತ್ತರದ ಕಟ್ಟಡ ನಿರ್ಮಾಣವಾಗಿದ್ದು ಎಲ್ಲ ಸ್ಥಾನೀಯವಾಗಿ ಲಭ್ಯವಿರುವ ಸಂಪನ್ಮೂಲಗಳಿಂದ. ಒಂದೇ ಬೃಹತ್ ಗುಂಡುಕಲ್ಲಿನ ಅಡಿಯಲ್ಲಿ ಗರ್ಭಗುಡಿಗಳು. ಗುಡ್ಡಕ್ಕೆ ವಿಭೂತಿ ಹಚ್ಚಿದಂತೆ ಕಾಣುವ ದೇವಾಲಯದಲ್ಲಿ ಕಲ್ಲಿನ ಬೃಹತ್ ಚೌಕಟ್ ಮುಖ್ಯದ್ವಾರಕ್ಕೆ ಇದ್ದರೆ. ಪುಟ್ಟ ಬಾಗಿಲು ಗರ್ಭಗುಡಿಗಿದೆ. ವ್ಯಕ್ತಿ ದೇವರ ದರ್ಶನಕ್ಕೆ ಬಂದಾಗ ಅಹಂ ತೊರೆದು ಬಾಗಿ ಬರಬೇಕು ಎಂಬ ಸೂಚ್ಯಾರ್ಥವಿದೆ. ಅಂದಿನ ಭಕ್ತರ ಶಕ್ತಿ ಸಾಮರ್ಥ್ಯಕ್ಕೆ ಸಾಕ್ಷಿಯಾಗಿ ಗುಡಿ ನಿರ್ಮಾಣವಾಗಿದೆ. ಭಕ್ತರ 108 ತಾಪತ್ರಯಗಳಿಗೆ ಪರಿಹಾರ ಸಿಗುವ ಸಂಕೇತವಾಗಿ ದೇವಾಲಯಕ್ಕೆ ನೂರೆಂಟು ಮೆಟ್ಟಿಲುಗಳಿವೆ. ಯಾರಿಗೂ ಮೆಟ್ಟು ಹತ್ತಿದ ಆಯಾಸವಾಗಬಾರದು ಎಂದು ಪ್ರತಿ 5–6 ಮೆಟ್ಟಿಲ ನಂತರ ನಡೆಯಲು ಅಗಲ ವಾದ ಜಾಗವಿದೆ. ಶ್ರೀರಾಚೋಟಿವೀರಣ್ಣ ಮಾತೃಹದಯವುಳ್ಳ ದೇವರು. ಕೈಚಾದಿದವರ ಹತ್ತಿರ ಮುಗಳುನಗೆ ಬೀರುತ್ತ ಧಾವಿಸುವ ಮುಗ್ಧ ಮಗುವಿನಂತೆ ಶ್ರೀ ರಾಚೋಟಿ ವೀರಣ್ಣ ತನಗಾಗಿ ಬರುವ ಭಕ್ತರನ್ನು ಪ್ರೀತಿಯಿಂದ ಸ್ವಾಗತಿಸಿ ಹಾರೈಸುತ್ತಾನೆ. ಮನದೀಚ್ಛೆ ಪೂರೈಸುತ್ತಾನೆ. ಇಲ್ಲಿ ಎಲ್ಲ ಕಡೆ ಇರುವಂತೆ ರೌದ್ರತೆ ಇಲ್ಲ. ಅಗ್ಗಿ ತುಳಿವ ಪರಂಪರೆಯಿಲ್ಲ. ಕೇವಲ ಪಾಲಕಿಯಲ್ಲಿ ಕುಳಿತು ಗಂಗಸ್ನಾನಕ್ಕೆ ಹೋಗಿ ಬರುವ ಪದ್ಧತಿ ಇದೆ. ಒಂದೆರಡು ದಶಕಗಳ ಹಿಂದೆ ದೇವಾಲಯಕ್ಕೆ ಬಾಗಿಲುಗಳೇ ಇರಲಿಲ್ಲ. ಸಾರ್ವಜನಿಕರು, ಶ್ರದ್ಧೆಯ ಹಿಂದು ಪಂಥ ಪಂಗಡಗಳ ಭಕ್ತರು ನೇರವಾಗಿ ದೇವರ ದರ್ಶನ ಮಾಡಿ ಧನ್ಯರಾಗಬಹುದಿತ್ತು. ಆದರೆ ಇತ್ತೀಚಿಗೆ ಗುಡಿಯಲ್ಲಿ ಪೂಜಾ ಸಾಮಾನುಗಳ ರಕ್ಷಣೆಗಾಗಿ ಬಾಗಿಲು ಅಳವಡಿಸಿದ್ದಾರೆ. ಇಹಪರಗಳ ಜೀವದಲ್ಲಿ ಸತ್ಸಂಗ ಇರಬೇಕು ಎನ್ನುವ ಸೂಚಕವಾಗಿ ಭೂಮಿ ಮೇಲೆ ಆಕಾಶದೆತ್ತರದ ಆಧಾರ ಸ್ಥಂಭ ಇದೆ. ಸಜ್ಜನರು ದೀಪದಂತೆ ದೇವಸ್ಥಾನ ಬೆಳಗಲು ಹಣತೆ ಇರಬೇಕು ಅದೇ ರೀತಿ ಸಜ್ಜನರು ದೇವಾಲಯಗಳಿಗೆ ಬಂದಾಗ ಅಲ್ಲಿ ಜ್ಞಾನದ ಭಕ್ತಿಯ ಬೆಳಕು ಹರಡುತ್ತದೆ ಎಂದು ತಿಳಿಸುವ ಬೃಹತ್ ದೀಪಸ್ಥಂಭ ಇದೆ. ಬಂದ ಭಕ್ತರನ್ನು ಸ್ವಾಗತಿಸಿ ಹರಗುರುವಿನ ದರ್ಶನ ಮಾಡಿಸಲು ಸಾಕ್ಷಾತ್ ನಂದಿ ವಿರಾಜಮಾನನಾಗಿದ್ದಾನೆ. ಶಕ್ತಿ ಸ್ವರೂಪಿಣಿ ಮಹಾಕಾಳಿ, ಮನುಷ್ಯನ ಪ್ರಾಣ/ಧೀಶಕ್ತಿಯ ಪ್ರತೀಕ ನಾಗದೇವತೆ ದರ್ಶನ ಭಾಗ್ಯ ಸಿಗುತ್ತದೆ. ಕೆಳಗೆ ಶಿವನ ಗುಡಿಯಲ್ಲಿ ಶಿವಲಿಂಗದ ದರ್ಶನ ಸಿಗುತ್ತದೆ.

ಭಕ್ತರಿಗೆ ಭಾಗ್ಯ ಕರುಣಿಸುವ ದೇವಾಲಯದ ಅಸ್ತಿತ್ವದ ರಕ್ಷಣೆ, ಸರ್ಕಾರ ಆಸ್ತಿಯ ರಕ್ಷಣೆ ಎಲ ಪ್ರಜೆಗಳ ಕರ್ತವ್ಯವಾಗಿದೆ. ಸನಾತರು ಹೇಳುವಂತೆ ಮಾತಾಪಿತೃ ಋಣ, ದೇವ ಋಣ, ಸಮಾಜ ಋಣ ಹಾಗೂ ರಾಷ್ಟ್ರ ಋಣ ತೀರಿಸುವ ಸದಾವಕಾಶ ಬಂದಾಗ ಸುಮ್ಮನೆ ಕೂಡದೆ ಕ್ರೀಯಾಶೀಲರಾಗಿ ಭಾಗವಹಿಸಿ ಋಣಮುಕ್ತರಾಗಬೇಕು. ಸನಾತನ ವಾರಸುದಾರಿಕೆಯ ಋಣ ತೀರಿಸುವ ಜವಾಬ್ದಾರಿ ಪ್ರತಿ ಭಾರತೀಯರದ್ದಾಗಿದೆ. ಬನ್ನಿ. ಪೂಜ್ಯ ಶಿವಾಚಾರ್ಯರ, ಪೂಜ್ಯ ಮಹಾಸ್ವಾಮಿಗಳ, ಸಾಮಾಜಿಕ ಹಾಗೂ ಧಾರ್ಮಿಕ ಮುಖಂಡರ ನೇತೃತ್ವದಲ್ಲಿ ಹಮ್ಮಿಕೊಂಡ ಜನಜಾಗೃತಿ ಪ್ರತಿಭಟನಾ ಪಾದಯಾತ್ರೆಯಲ್ಲಿ ಭಾಗವಹಿಸಿ ತ್ರಿವೇಣಿ ಸಂಗಮದ ಸ್ನಾನದಷ್ಟೇ ಪುಣ್ಯಕ್ಕೆ ಭಾಜನರಾಗಬೇಕು. ದೇವಸ್ಥಾನದದಲ್ಲಿ ದೇವರ ದರ್ಶನ ಪಡೆದು ಅಭಿಷೇಕ, ಪೂಜೆ, ಟೆಂಗು ಒಡೆದು ನಮಸ್ಕಾರ ಮಾಡಿ ಮನೆಗ ಹೋಗುವುದಕ್ಕಿಂತ ನಮ್ಮ ನಿಮ್ಮ ಶ್ರದ್ಧಾಕೇಂದ್ರದ ರಕ್ಷಣೆ ಆದ್ಯ ಕರ್ತವ್ಯವಾಗಿದೆ. ಸ್ವಚ್ಛ ಸುಂದರ ಮಂಗಲಮಯ ಸ್ಥಾನದಲ್ಲಿ ಪರಮಾತ್ಮನು ವಾಸಿಸುತ್ತಾನೆ. ಆದ್ದರಿಂದ ಎಲ್ಲ ಭಕ್ತರು ದೇವಾಲಯಕ್ಕೆ ಭೇಟಿ ನೀಡಿದಾಗ ಅಲ್ಲಿನ ಸ್ವಚ್ಛತೆ ಕಡೆ ಗಮನಹರಿಸಬೇಕು. ಸಾಯುವವರೆಗೆ ಸಂಸಾರ ಕೆಲಸ ಇದ್ದೇ ಇರುತ್ತದೆ. ಕಷ್ಟ ಬಂದಾಗ ಮಾತ್ರ ದೇವರನ್ನು ಸ್ಮರಿಸುವುದಕ್ಕಿಂದ ದೇವಸ್ಥಾನದ ರಕ್ಷಣೆ ಸಂದರ್ಭದಲ್ಲಿ ತನು ಮನ ಧನಗಳಿಂದ ಸೇವೆ ಮಾಡಿ ಋಣಮುಕ್ತರಾಗಬೇಕು. ಅಂತಹ ಅವಕಾಶ ಜೀವಮಾನದಲ್ಲಿ ಒಮ್ಮೆ ಸಿಗುತ್ತದೆ. ಭಕ್ತರ ಭಕ್ತಿ ಪರೀಕ್ಷೆಗಾಗಿ ದೇವರು ಒಡ್ಡಿದ ಪರೀಕ್ಷೆಯಲ್ಲಿ ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾಗುವ. ಜುಲೈ 8 2025ರಂದು ಯಾದಗಿರಿಯ ಹಿಂದೂ ಸಮಸ್ತ ಪಂಥ ಪಂಗಡಗಳ ಬಾಂಧವರು ಎಲ್ಲ ಸದ್ಭಕ್ತರು ಶ್ರೀ ಲಕ್ಷ್ಮೀಗುಡಿಯಿಂದ ಬೆ 11 ಗಂಟೆಗೆ ಆರಂಭವಾಗಲಿರುವ ಪಾದಯಾತ್ರೆಯಲ್ಲಿ ಭಾಗವಹಿಸಲು 10ಗಂಟೆಗೆ ಬಂಧು ಮಿತ್ರರ ಜೊತೆ ಬರಲು ವಿನಂತಿ

**– ಮಹಾದೇವಯ್ಯ ಕರದಳ್ಳಿ**
ಗಿರಿದಾಮ, ರಾಷ್ಟ್ರಕೂಟ ರಸ್ತೆ, ಓಂ ನಗರ ಕಲಬುರ್ಗಿ

# ವೈದ್ಯರ ಜೀವನ ಸಂಕಟದಾಯಕ, ನೆಮ್ಮದಿ ರಹಿತ ಜೀವನ :ಪದ್ಮಶ್ರೀ ಡಾ. ಸಿ ಆರ್ ಚಂದ್ರಶೇಖರ್ ಕಳವಳ



ಜನವಾದಿ ವಾರ್ತೆ

ರಾಯಚೂರು ಜು 7– ಇತ್ತೀಚೆಗೆ ಹೃದಯಾಘಾತ ಹೆಚ್ಚಿವೆ. ಖಿನ್ನತೆ ಪ್ರಕರಣ ಅಧಿಕವಾಗುತ್ತಿವೆ.

ಶುದ್ಧ, ಹಿತಮಿತ, ಸಾತ್ವಿಕ ಆಹಾರ ಯಾರಿಗೂ ಬೇಡವಾಗಿದೆ. ಹೈದರಾಬಾದ್ ಬಿರ್ಯಾನಿ, ಧಮ್ ಬಿರಿಯಾನಿ, ಗೋಬಿ ಮಂಚೂರಿ ಬೇಕಾಗಿದೆ. ಇದರಿಂದ ಕಾಯಿಲೆಗಳು ಹೆಚ್ಚಾಗಿವೆ ಎಂದು ಪದ್ಮಶ್ರೀ ಪುರಸ್ಕೃತ ಮನೋವೈದ್ಯ ಡಾ.ಸಿ.ಆರ್. ಚಂದ್ರಶೇಖರ ಹೇಳಿದರು.

ನಗರದ ರಾಯಲ್ ಫೋರ್ಟ್ ಹೋಟೆಲ್ನಲ್ಲಿ ಕಲಾ ಸಂಕುಲ ಸಂಸ್ಥೆ ವೈದ್ಯರ ದಿನಾಚರಣೆ ನಿಮಿತ್ತ ಹಮ್ಮಿಕೊಂಡಿದ್ದ ವೈದ್ಯ ರತ್ನ ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಚಾಲನೆ ನೀಡಿ ಭಾನುವಾರ ಮಾತನಾಡಿದರು.

ಎಲ್ಲದಕ್ಕೂ ಕೆಮಿಕಲ್ ಹೆಚ್ಚು ಹಾಕುತ್ತಿರುವುದರಿಂದ ಕ್ಯಾನ್ಸರ್ ಪ್ರಕರಣ ಹೆಚ್ಚಿವೆ. 59%ವೈದ್ಯರು ಡಯಾಬಿಟೀಸ್ನಿಂದ ಬಳಲುತ್ತಿದ್ದಾರೆ. ರೋಗ, ರುಜಿನಗಳು ಹೆಚ್ಚಿವೆ. ಕನಿಷ್ಠ ವ್ಯಾಯಾಮವನ್ನೂ ಜನ ಮರೆತಿದ್ದಾರೆ ಎಂದು ಹೇಳಿದರು

ಕರೆ ಬಂದೊಡನೆ ವೈದ್ಯರು ಚಿಕಿತ್ಸೆಗೆ ಸ್ಪಂದಿಸದಿದ್ದರೆ ಅಹಂಕಾರ ಎನ್ನುತ್ತಾರೆ. ಹಲ್ಲೆ ಮಾಡುತ್ತಾರೆ. ಹಾಗಾಗಿ, ವೈದ್ಯರ ಜೀವನ ಅತ್ಯಂತ ಸಂಕಟದಾಯಕವಾಗಿದೆ. ನೆಮ್ಮದಿ ರಹಿತವಾಗಿದೆ. ನಿಜಕ್ಕೂ ದುರಂತ. ಗುರು ದೇವೋಭವ, ಪಿತೃದೇವೋಭವ, ಆಚಾರ್ಯ ದೇವೋಭವ ನಂತರ ವೈದ್ಯೋದೇವೋಭವ ಎಂಬುದನ್ನು ಎಲ್ಲರೂ ಅರಿಯಬೇಕಾಗಿದೆ ಎಂದರು.

ಇತ್ತೀಚೆಗೆ ಹುಡುಗಿಯರೂ ಧೂಮಪಾನ ಮಾಡುವುದು ಹೆಚ್ಚಿದ್ದು ನಿಮ್ಮ ಆರೋಗ್ಯ ಕಾಪಾಡಿಕೊಳ್ಳಿ ಜತೆಗೆ ಜನರ ಆರೋಗ್ಯ ವರ್ಧನೆಗೂ ಗಮನವಿಡಿ ಎಂದು ವೈದ್ಯರಿಗೆ ಸಲಹೆ ನೀಡಿದರು. ಆರೋಗ್ಯಕ್ಕಾಗಿ ಮುಖದಲ್ಲಿ ಮುಗುಳ್ನಗೆ, ಎದೆಯಲ್ಲಿ ಪ್ರೀತಿ, ಮನಸ್ಸಲ್ಲಿ ಶಾಂತಿ ಇರುವಂತೆ ನೋಡಿಕೊಳ್ಳಿ ಎಂದು ಇದೇ ವೇಳೆ ಹೇಳಿದರು.

ಡಿಎಚ್‌ಒ ಡಾ.ಸುರೇಂದ್ರ ಬಾಬು ಮಾತನಾಡಿ, ಕಲ್ಯಾಣ ಕರ್ನಾಟಕಕ್ಕೆ ಹೆಚ್ಚು ಅನುದಾನ ಬರುತ್ತಿರುವುದು ಉತ್ತಮ ಬೆಳವಣಿಗೆ. ಸರಕಾರಿ ಆಸ್ಪತ್ರೆ ಅಂದರೆ ಮೂಗು ಮುರಿಯುವವರು ನಾಚುವಂತೆ ಇತ್ತೀಚೆಗೆ ಸವಲತ್ತು ಬರುತ್ತಿವೆ. ಆದಾಗ್ಯೂ ಆರೋಗ್ಯ ಕ್ಷೇತ್ರದಲ್ಲಿ ಸಾಕಷ್ಟು ಪ್ರಗತಿ ಸಾಧಿಸಬೇಕಾಗಿದೆ ಎಂದು ಹೇಳಿದರು.

ರಿಮ್ಸ್ ಪ್ರಾಂಶುಪಾಲ ಡಾ.ರಾಹುಲ್ ಕೀರ್ತಿ ಮಾತನಾಡಿದರು.

ಇದೇ ವೇಳೆ ಡಾ. ಸಿ.ಆರ್. ಚಂದ್ರಶೇಖರ ಅವರ ಕೃತಿ 'ಸ್ಟಾಪ್ ವರಿಯಿಂಗ್, ಬಿ ಹ್ಯಾಪ್ಪಿ ಅಂಡ್ ಹೆಲ್ತಿ' ಬಿಡುಗಡೆಗೊಳಿಸಲಾಯಿತು.

ಬಳಿಕ ಸಮಾಜ ಸೇವಾ ರತ್ನ ಪ್ರಶಸ್ತಿಯನ್ನು ಜಾವೀದ್ ಖಾನ್ ವೈದ್ಯರತ್ನ ಪ್ರಶಸ್ತಿಯನ್ನು ಡಾ.ಅಮೃತಾ ಎಸ್ . ಬೆನ್ನಾಳ, ಡಾ.ಇಂದರಚಂದ ಸಿಂಘ್ವಿ, ಡಾ. ಎನ್.ಲಕ್ಷ್ಮೀಕಾಂತ ಯರಗೇರಾ, ಡಾ. ಆಶಾ ಹೋಳ್ಕರ್, ಡಾ.ಫರಹಾ ನಸೀರ್, ಡಾ.ಅಕ್ಷಯ್ ಕುಮಾರ, ಡಾ.ತನ್ವೀರ್ ಅಹ್ಮದ್, ಡಾ.ಮುರಳಿರಾವ್ ಅವರಿಗೆ ವೈದ್ಯರತ್ನ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

_ಕಲಾ ಸಂಕುಲ ಸಂಸ್ಥೆಯ ರೇಖಾ ಬಡಿಗೇರ, ಲೋಕೋಪಯೋಗಿ ಇಲಾಖೆ ಎಂಜಿನಿಯರ್ ವೆಂಕಟೇಶ ಗಲಗ, ಭಾರತೀಯ ವೈದ್ಯಕೀಯ ಸಂಘದ ಜಿಲ್ಲಾಧ್ಯಕ್ಷ ಡಾ.ಶೈಲೇಶ್ ಅಮರಖೇಡ, ಮನೋವೈದ್ಯ ಡಾ.ಮನೋಹರ ಪತ್ತಾರ, ಸರಕಾರಿ ನೌಕರರ ಸಂಘದ ಅಧ್ಯಕ್ಷ ಕೃಷ್ಣ ಶಾವಂತಗೇರಾ ಇತರರು ಇದ್ದರು.. ಅಮರಗೌಡ ಕುಮಾರಿ ಸಂತೋಷಿ ಫಾತಿಮಾ ಹುಸೇನ್ . ದಂಡಪ್ಪ ಬಿರಾದಾರ್ . ಮೌನೇಶ ವಡವಾಟಿ. ಶಿವರಾಜ್ ಜಗಲಿ. ವಿರುಪಾಕ್ಷಿ ಗೌಡ . ಪರಶುರಾಮ ಸರೋದೆ. ಇನ್ನಿತರರು ಭಾಗವಹಿಸಿದ್ದರು

# ಮೊದಲನೇ ಪುಟದಿಂದ

## ಅಧಿಕಾರಿಗಳಿಗೆ ಮಾನಸಿಕ ಕಿರುಕುಳ – ಕೆ.ಕರಿಯಪ್ಪ

ಸಚಿವ ಶಿವರಾಜ ತಂಗಡಗಿ ಅಧಿಕಾರದ ಮದದಲ್ಲಿ ಬಿಜೆಪಿ ನಾಯಕರ ಬಗ್ಗೆ ಮಾತನಾಡುತ್ತಿದ್ದಾರೆ. ತಾವು ಎಲ್ಲಿಂದ ಬಂದಿದ್ದು ಎನ್ನುವದನ್ನು ಮರೆತಿದ್ದಾರೆ. ವಿಧಾನ ಪರಿಷತ್ ಸದಸ್ಯರಾದ ಸಿ.ಟಿ.ರವಿ ಹಾಗೂ ಎನ್.ರವಿಕುಮಾರ ಬಗ್ಗೆ ಅವಹೇಳನ ರೀತಿಯಲ್ಲಿ ಸಚಿವ ತಂಗಡಗಿ ಟೀಕೆ ಮಾಡಿದ್ದಾರೆ. ರವಿಕುಮಾರ ಅವರ ಹೇಳಿಕೆ ಮೊದಲು ಅರ್ಥ ಮಾಡಿಕೊಂಡು ಮಾತನಾಡಲಿ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೈಸೂರಿನಲ್ಲಿ ಮಹಿಳೆಯೋರ್ವಳ ಸೀರೆ ಎಳೆದಿದ್ದು, ಬೆಳಗಾವಿಯಲ್ಲಿ ಪೊಲೀಸ್ ಹಿರಿಯ ಅಧಿಕಾರಿಯ ಮೇಲೆ ಕೈ ಎತ್ತಿದ್ದು ತಂಗಡಗಿ ನೋಡಿಲ್ಲ ಎಂದು ಕಾಣಿಸುತ್ತದೆ. ಸಿ.ಟಿ.ರವಿ ಹಾಗೂ ರವಿಕುಮಾರ ಅವರಿಗೆ ಆರ್‌ಎಸ್‌ಎಸ್ ತರಬೇತಿ ನೀಡಿದೆ. ಅದಕ್ಕಾಗಿ ಅವರು ಮಾತನಾಡುತ್ತಿದ್ದಾರೆ ಎನ್ನುವ ತಂಗಡಗಿ ಹೇಳಿಕೆಗೆ ನೀವು ಆರ್‌ಎಸ್‌ಎಸ್, ಬಿಜೆಪಿಯಿಂದಲೇ ರಾಜಕಾರಣಕ್ಕೆ ಬಂದು, ಈಗ ಕಾಂಗ್ರೆಸ್‌ನಲ್ಲಿ ನೆಲೆಕಂಡುಕೊಂಡಿದ್ದೀರಿ. ಟೀಕೆ ಮಾಡುವದರಿಂದ ಯಾರು ದೊಡ್ಡವರಾಗಲ್ಲ ಎನ್ನುವದನ್ನು ಅರ್ಥ ಮಾಡಿಕೊಳ್ಳಬೇಕು ಎಂದರು.

ಬಿಜೆಪಿ ಗ್ರಾಮೀಣ ಮಂಡಲ ಅಧ್ಯಕ್ಷ ವೆಂಕೋಬ ನಾಯಕ, ಬಿಜೆಪಿ ನಗರ ಮಂಡಲ ಅಧ್ಯಕ್ಷ ಸಿದ್ರಾಮೇಶ ಮನ್ನಾಪುರ, ಮುಖಂಡರಾದ ಆದಿಮನಿ ಪರಮೇಶಪ್ಪ, ಬಸವರಾಜ ಸಿದ್ರಾಂಪುರ ಇದ್ದರು.

## ಯೋಜನೆ ತ್ವರಿತವಾಗಿ ಪೂರ್ಣಗೊಳಿಸಿ: ರಾಹುಲ್

ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲೆಯ ಎಲ್ಲಾ ಶಾಲೆಗಳು ಮತ್ತು ಅಂಗನಾಡಿಗಳಿಗೆ ಜಲಜೀವನ್ ಮಿಷನ್ ಯೋಜನೆಯನ್ನು ಅನುಷ್ಠಾನಗೊಳಿಸಬೇಕು. ಯಾದ-ಯಾವ ಶಾಲೆಗಳಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ. ಅವನ್ನು ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಮಹಜರು ಮಾಡಿ ವರದಿ ನೀಡಬೇಕು. ಅಂಗನವಾಡಿಗಳಲ್ಲಿ ಬಳಸಲಾಗುವ ನೀರನ್ನು ಸುಯಾಗಿದೆಯೇ ಇಲ್ಲವೇ ಎಂಬುವುದನ್ನು ಆರೋಗನಿ ಇಲಾಖೆಯಿಂದ ಪರೀಕ್ಷೆ ನಡೆಸಬೇಕು. ಮುಖ್ಯವಾಗಿ ಕುಡಿಯುವ ನೀರು ಹಾಗೂ ಅಡುಗೆಗೆ ಬಳಸುವ ನೀರನ್ನು ಸರಿಯಾಗಿ ಪರೀಕ್ಷೆ ಮಾಡಲೇಬೇಕು ಎಂದು ತಿಳಿಸಿದರು. ಪ್ರತಿ ದಿನವೂ ಆರೋಗ್ಯ ಇಲಾಖೆಯಿಂದ ನೀರಿನ ಪರೀಕ್ಷಾ ವರದಿಯನ್ನು ಪಡೆಯಲಾಗುತ್ತಿದೆ. ಆಯಾ ಗ್ರಾಮಗಳ ನೀರಿನ ಗುಣಮಟ್ಟದ ಪರೀಕ್ಷೆಯನ್ನು ಆಯಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಂದ ಪಡೆಯಲಾಗುತ್ತದೆ. ಜೊತೆಗೆ ಡೆಂಗ್ಯೂ ಮಾಹಿತಿಯನ್ನೂ ಪಡೆಯಲಾಗುತ್ತಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕಾರ್ಯಪಾಲಕ ಅಭಿಯಂತರರಾದ ನಾಗೇಶ್, ಸಾರ್ವಜನಿಕ ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಕೆ.ಡಿ.ಬಡಿಗೇರ, ಜಿಲ್ಲಾ ಸಮೀಕ್ಷಣಾಧಿಕಾರಿ ಡಾ.ಗಣೇಶ್, ಜಿಲ್ಲಾ ಗಿರಿಜನ ಕಲ್ಯಾಣಾಧಿಕಾರಿ ಮಲ್ಲಯ್ಯ ಕೆ., ರಾಯಚೂರು ಕೃಷಿ ಇಲಾಖೆಯ ಸಹಾಯಕ ನಿರ್ದೇಶಕರಾದ ಪುಷ್ಪಲತಾ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿ ಹಾಗೂ ಸಿಬ್ಬಂದಿಗಳು ಇದ್ದರು.

## ಕೋಟೆಗಳ ಸಂರಕ್ಷಣೆ ನಮ್ಮೆಲ್ಲರ ಜವಾಬ್ದಾರಿ -ಎನ್‌ಎಸ್ ಬೋಸರಾಜು

ಸೇತುವೆ ಮುಂಭಾಗ ಇರುವ ಕೋಟೆಪುರ ಸಂರಕ್ಷಣೆ ಹಾಗೂ ಕೆಇಬಿ ಕಚೇರಿಯಿಂದ ಕಂದಕಕ್ಕೆ ಹೊಂದಿಕೊಂಡಿರುವ ರಾಜಕಾಲುವೆಯಲ್ಲಿ ಹೂಳೆತ್ತುವ ಮೂಲಕ ಚರಂಡಿ ನೀರು ಸರಾಗವಾಗಿ ಹರಿದು ಹೋಗುವಂತೆ ಮಾಡುವುದು ಸೇರಿ ಕೋಟೆ ಸಂರಕ್ಷಣೆಯ ವಿವಿಧ ಕಾಮಗಾರಿಗಳನ್ನು ಪರಿಶೀಲಿಸಿದರು.

ನೂರಾರು ವರ್ಷದ ಐತಿಹಾಸಿಕ ಪಾರಂಪರಿಕತೆಯನ್ನು ಸೂಚಿಸುವ ಕೋಟೆಗಳನ್ನು ನಾವೆಲ್ಲರೂ ಸಂರಕ್ಷಿಸಿ, ಪ್ರವಾಸಿಗರ ತಾಣವನ್ನಾಗಿ ಮಾಡಬೇಕಾಗಿದೆ ಎಂದು ಅಧಿಕಾರಿಗಳಿಗೆ ತಿಳಿಸಿದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆಯ ಆಯುಕ್ತರಾದ ಜುಬೇನ್ ಮಹಾಪತ್ರ ಮಹಾನಗರ ಪಾಲಿಕೆಯ ಮಹಾಪೌರರಾದ ನರಸಮ್ಮಾ ನರಸಿಂಹಲು ಮಾಡಗಿರಿ, ಕೆ ಶಾಂತಪ್ಪ, ಹಿರಿಯರಾದ ಜಯಣ್ಣ, ಉಪ ಮಹಾಪೌರರಾದ ಸಾಜಿದ್ ಸಮೀರ್, ಮಹೇಶ್, ನರಸಿಂಹಲು ಮಾಡಗಿರಿ, ಬಸವರಾಜ ಪಾಟೀಲ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಹೆಚ್ಚು ಗಮನ ಹರಿಸಿ- ಆರ್.ಗುರುನಾಥ

ಪತ್ರಕರ್ತರು ಕೆಲಸದ ಒತ್ತಡದಲ್ಲಿ ಆರೋಗ್ಯಕ್ಕೆ ಒತ್ತು ಕೊಡದೇ ಇದ್ದ ಸಂದರ್ಭದಲ್ಲಿ, ಈ ರೀತಿಯ ಘಟನೆಗಳು ನಡೆಯುತ್ತವೆ, ಆರೋಗ್ಯಕ್ಕೆ ಒತ್ತು ನೀಡಬೇಕು, ಜೊತೆಗೆ ತಮ್ಮ ಕುಟುಂಬ ನಿರ್ವಹಣೆಯ ಜವಾಬ್ದಾರಿಯನ್ನು ಮರೆಯಬಾರದು ಎಂದು ತಿಳಿಸಿದರು.

ಹಿರಿಯ ಪತ್ರಕರ್ತ ವೆಂಕಟಸಿಂಗ್ ಮಾತನಾಡಿ, ರಾಮು ಕಳೆದ 2 ವರೆ ದಶಕಗಳ ಹಿಂದೆ ಮಾಧ್ಯಮ ಕ್ಷೇತ್ರದಲ್ಲಿ ಪ್ರವೇಶ ಮಾಡಿದ್ದ, ಅವರಿಗೆ ಆರಂಭದಲ್ಲಿ ರಂಗ ಕ್ಷೇತ್ರದಲ್ಲಿ ಆಸಕ್ತಿ ಇತ್ತು ಜೊತೆಗೆ, ಮಾಧ್ಯಮ ಕ್ಷೇತ್ರದಲ್ಲಿ ಆಸಕ್ತಿ ಬೆಳಸಿಕೊಂಡು ಬಂದರು, ಅವರ ಜೊತೆಗೆ ಸಾಕಷ್ಟು ಜನರು ಕೆಲಸ ಮಾಡಿದ್ದಾರೆ. ಪತ್ರಕರ್ತರಾದವರು ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು ಇಲ್ಲದೇ ಇದ್ದರೆ ಬಹುದೊಡ್ಡ ಕಷ್ಟ ಅನುಭವಿಸಬೇಕಾಗುತ್ತಿದೆ, ರಾಮು ಅವರು ಆರೋಗ್ಯಕ್ಕೆ ಒತ್ತು ನೀಡಿರಲಿಲ್ಲ, ನಿರ್ಲಕ್ಷ್ಯ ವಹಿಸಿದ್ದರು,ಇದೀಗ ಅವರ ಅನಾರೋಗ್ಯವೇ ಅವರನ್ನು ಸಾವಿಗೀಡಾಗುವಂತೆ ಮಾಡಿದೆ ಎಂದರು.

ಪತ್ರಕರ್ತರು ನಮ್ಮ ಆರೋಗ್ಯ ಒತ್ತು ನೀಡಿವುದು ಮುಖ್ಯ, ಯಾವುದೇ ವೃತ್ತಿ ಬದ್ದತೆ ಇದ್ದರೂ ಆರೋಗ್ಯ ಕ್ಕೆ ಒತ್ತು ನೀಡಬೇಕು, ಯಾವುದೇ ದುಶ್ಚಟಗಳಿಗೆ ಹೆಚ್ಚು ದಾಸರಾಗಬಾರದು, ವೃತ್ತಿ ಬದ್ಧತೆ ಜೊತೆಗೆ ಆರೋಗ್ಯಕ್ಕೆ ಆದ್ಯತೆ ನೀಡಿ ಕುಟುಂಬದ ಭದ್ರತೆಗೆ ಕಾಳಜಿ ವಹಿಸಬೇಕು ಎಂದರು.

ಹಿರಿಯ ಪತ್ರಕರ್ತ ರಂಗನಾಥ ಚಕ್ರವರ್ತಿ ಮಾತನಾಡಿ, ಆರ್. ರಾಮು ಅವರು ಸಾವಾಗಿದ್ದು ತುಂಬಲಾರದ ನಷ್ಟ ಅವರಿಗೆ ಮಕ್ಕಳಿದ್ದು ವಿದ್ಯಾಬ್ಯಾಸ ಮತ್ತು ಆರ್ಥಿಕ ನಿರ್ವಹಣೆ ಸಹಾಯ ಮಾಡಬೇಕು, ಪತ್ರಕರ್ತರು ಹೆಚ್ಚಾಗಿ ಆರೋಗ್ಯ ಕಡೆಗೆ ಗಮನ ಕೊಡುವುದು ಇತ್ತೀಚೆಗೆ ಕಡಿಮೆಯಾಗಿದೆ, ಆರೋಗ್ಯ ರಕ್ಷಣೆ ಇಲ್ಲದೆ ಇದ್ದರೆ ನಮ್ಮ ಕುಟುಂಬ ನೋಡುಕೊಳ್ಳುವವರು ಯಾರು, ಆರೋಗ್ಯವನ್ನು ಕಾಪಾಡಕೊಂಡು ವೃತ್ತಿಯಲ್ಲಿ ಮುಂದುವರೆಯಬೇಕು ಎಂದರು.

ಹಿರಿಯ ಪತ್ರಕರ್ತ ಭೀಮರಾಯ ಹದ್ದಿನಾಳ ಮಾತನಾಡಿ, ಆರ್. ರಾಮು ಅವರು ಸಿನಿಮಾ ಕ್ಷೇತ್ರದಲ್ಲಿ ಇದ್ದರು ಅವರು ಸಿನಿಮಾದಲ್ಲಿ ನಷ್ಟ ಉಂಟಾಯಿತು. ಅವರನ್ನು ಮೊದಲ ಬಾರಿಗೆ ಪತ್ರಿಕಾ ಕ್ಷೇತ್ರಕ್ಕೆ ಪರಿಚಯಿಸಿದೆ, ಅವರ ಬರವಣಿಗೆ ಇಷ್ಟ ಆಯಿತು. ನಂತರ ಜನವಾಹಿನಿ ಪತ್ರಿಕೆಯ ವರದಿಗಾರರಾಗಿ ಸೇರಿಕೊಂಡರು, ಜೊತೆಗೆ ಸಂಜೆವಾಣಿ ವರದಿಗಾರರಾಗಿ ಕೆಲಸ ಮಾಡದರು, ನಂತರ ಮೇಘಾ ಚಾನಲ್ ವರದಿಗಾರಾಗಿ ಕೆಲಸ ಮಾಡಿ ಆರಂಭಿಸಿ 10 ವರ್ಷ ಮಾಧ್ಯಮ ಕ್ಷೇತ್ರದಲ್ಲಿ ಉತ್ತಮವಾಗಿ ಬೆಳೆದರು ಎಂದು ತಿಳಿಸಿದರು. ರಾಮು ಅವರು ಮಾಧ್ಯಮ ಕ್ಷೇತ್ರ ತೊರೆದು ಬೇರೆ ಕೆಲಸಗಳಿಗೆ ಹೋದರು. ನಂತರ ಪ್ರಜಾ ಪ್ರಸಿದ್ಧ ಪತ್ರಿಕೆಯಲ್ಲಿ ಕೆಲಸ ಮಾಡಿದರು, ಕುಟುಂಬ ಆರ್ಥಿಕ ಸಂಕಷ್ಟದಲ್ಲಿ ಇದೆ ಅವರ ಕುಟುಂಬಕ್ಕೆ ಅನೇಕ ದಾನಿಗಳು ಸಹಾಯ ಮಾಡಿದ್ದಾರೆ, ಸಂಘದಿಂದ ಹಾಗೂ ವೈಯಕ್ತಿಕವಾಗಿ ಸಹಾಯ ಮಾಡೋಣ ಎಂದರು. ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಸಮಿತಿ ಸದಸ್ಯ ಶಿವಮೂರ್ತಿ ಹಿರೇಮಠ ಮಾತನಾಡಿ, ಆರ್. ರಾಮು ಅವರು ಆರಂಭದಲ್ಲಿ ಪರಿಚಯರಾಗಿದ್ದ ವೇಳೆ ಹೊಸದನ್ನು ಏನಾದರೂ ಮಾಡಬೇಕು ಎನ್ನುವ ಛಲ ಅವರಲ್ಲಿತ್ತು, ಅರಂಭದಲ್ಲಿ ಉತ್ತಮ ಕೆಲಸ ಮಾಡಿದ್ದರು ಎಂದರು. ಈ ವೇಳೆ ಪತ್ರಕರ್ತರಾದ ವೆಂಕಟೇಶ ಹೂಗಾರ, ಜಗನ್ನಾಥ ಪೂಜಾರ, ಅಣ್ಣಪ್ಪ ಮೇಟಿಗೌಡ, ದುರುಗೇಶ ಅಬ್ದುಲ್ ಖಾದರ್ ಮಾತನಾಡಿದರು. ಈ ಸಂದರ್ಭದಲ್ಲಿ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ, ಎಂ.ಪಾಷಾ ಹಟ್ಟಿ, ಉಪಾಧ್ಯಕ್ಷ ಶಿವಪ್ಪ ಮಡಿವಾಳರ್, ಪತ್ರಕರ್ತರಾದ ಜಿ.ವೀರಾರೆಡ್ಡಿ, ಮಲ್ಲಿಕಾರ್ಜುನ ಸ್ವಾಮಿ, ಸಿದ್ದಯ್ಯಸ್ವಾಮಿ ಕುಕನೂರು, ಹೆಚ್. ವೀರನಗೌಡ, ರಘುನಾಥ ರೆಡ್ಡಿ ಮನ್ಸಲಾಪೂರು, ಶಿವರಾಜ, ವಿಜಯಕುಮಾರ ಜಾಗಟಕಲ್, ಭೀಮೇಶ ಪೂಜಾರ, ಶಶಿಧರ ಅಂಗಡಿ, ಮುತ್ತಣ್ಣ ಹೆಳವರ್, ಶರಣಯ್ಯ ಹಿರೇಮಠ, ಶ್ರೀಕಾಂತ ಸಾವೂರ್, ಹುಸೇನಪ್ಪ, ನೀಲಕಂಠಸ್ವಾಮಿ, ಧಿರೇಂದ್ರ ಕುಲಕರ್ಣಿ, ಗುರುರಾಜ, ರಾಜು, ಮಂಜುನಾಥ ಸಾಲಿ, ಮಲ್ಲಿಕಾರ್ಜುನಯ್ಯ ಸ್ವಾಮಿ, ಅನಿಲ, ತಾಯಪ್ಪ, ಈರಪ್ಪ, ದುರುಗೇಶ, ಮಹಮದ್ ಜಿಲಾನಿ, ಅಬ್ದುಲ್ ಖಾದರ್, ಬಾಲು, ಹನುಮಂತ, ಶಿವು ಕುಮಾರ, ಸೇರಿದಂತೆ ಅನೇಕರು ಇದ್ದರು.

# ಹೆಬ್ಬುಲಿ ಕಟ್ ವಾಸ್ತವ ಸಮಾಜದ ಸತ್ಯದ ಪ್ರತೀಕವಾಗಿದೆ -ರವಿ ಬೋಸರಾಜು

**ಜನವಾದಿ ವಾರ್ತೆ**



ರಾಯಚೂರು ಜು 7- ಚಿತ್ರರಂಗ ಸಿನಿಮಾದಿಂದ ನಾನು ಸ್ವಲ್ಪ ದೂರ ಇದ್ದೇನೆ. ನಮ್ಮ ರಾಯಚೂರಿನ ಪ್ರತಿಭೆಗಳು ಮೊದಲ ಪ್ರಯತ್ನದ ಮೂಲಕ ನಿರ್ಮಾಣ ಮಾಡಿರ್ತಕ್ಕಂತಹ ಹೆಬ್ಬುಲಿ ಕಟ್ಟ್ ಸಿನಿಮಾ ನೋಡಿದ ನಂತರ ನನಗೆ ಬಹಳ ಖುಷಿಯಾಯಿತು. ಬಹಳ ಕಡಿಮೆ ವೆಚ್ಚದಲ್ಲಿ ಸಮಾಜದ ಕಟ್ಟು ಸತ್ಯವನ್ನ ತೋರಿಸುವ ಮೂಲಕ ಹೈಬಜೆಟ್ ಸಿನಿಮಾಗಳಿಗೂ ಪೈಪೋಟಿ ನೀಡಬಲ್ಲ ಸಿನಿಮಾ ಇದಾಗಿದೆ ಎಂದು ಕಾಂಗ್ರೆಸ್ ರಾಜ್ಯ ಯುವ ಮುಖಂಡರಾದ ರವಿ ಬೋಸರಾಜು ಅವರು ಅಭಿಪ್ರಾಯ ವ್ಯಕ್ತಪಡಿಸಿದರು.

ರಾಯಚೂರಿನ ಯುವಕ ಪಿ ಭೀಮರಾವ್ ನಿರ್ದೇಶನದ ಹಾಗೂ ನಿರ್ಮಾಣದ ಹೆಬ್ಬುಲಿ ಸಿನಿಮಾ ವನ್ನ ಕಾಂಗ್ರೆಸ್ ರಾಜ್ಯ ಯುವ ಮುಖಂಡರಾದ ರವಿ ಬೋಸರಾಜು ಅವರು ವೀಕ್ಷಿಸಿದ ನಂತರ ಮಾತನಾಡಿದರು.

ಪಿ ಭೀಮರಾವ್ ಅವರು ನನಗೆ ಅನೇಕ ಸಂದರ್ಭಗಳಲ್ಲಿ ಚಿತ್ರ ನಿರ್ಮಾಣದ ಬಗ್ಗೆ ನಂಜೊತೆಯಲ್ಲಿ ಚರ್ಚೆ ಮಾಡಿದರೆ ಅವರ ಈ ಕಥೆ ಬಗ್ಗೆ ನಾನು ಕೇಳಿರಲಿಲ್ಲ. ದಿನಕ್ಕೆ ಅನೇಕ ಸಣ್ಣಪುಟ್ಟ ಸಿನಿಮಾಗಳು ತೆರೆಯ ಮೇಲೆ ಬರುತ್ತವೆ ಅದೇ ರೀತಿ ಈ ಚಿತ್ರವು ಇರಬಹುದೆಂದು ನಾನು ಭಾವಿಸಿದೆ ಆದರೆ ನಾನು ಸಿನಿಮಾ ನೋಡಿದ ನಂತರವ ಗೊತ್ತಾಯಿತು ಇದು ದೊಡ್ಡ ಮಟ್ಟದ ಕೈ ಬಜೆಟ್ ಸಿನಿಮಾಗಳನ್ನು ಮೀರಿಸುವಂತಹ ಪ್ರತಿಭೆಗಳು ನಮ್ಮ ಜಿಲ್ಲೆಯಲ್ಲಿ ಇದಾರೆ ಎಂದು ಅಭಿಪ್ರಾಯ ವ್ಯಕ್ತಪಡಿಸಿ ಜಿಲ್ಲೆ ಸೇರಿ ರಾಜ್ಯದಾದ್ಯಂತ ಈ ಸಿನಿಮಾವನ್ನು ನೋಡುವ ಮೂಲಕ ಪ್ರತಿಮೆಗಳಿಗೆ ಪ್ರೋತ್ಸಾಹಿಸಬೇಕು ಎಂದು ಮನವಿ ಮಾಡಿದರು.

ಕಥೆ ನಿರ್ದೇಶಕ ಹಾಗೂ ನಿರ್ಮಾಪಕರಾದ ಬಿಮರಾವ್ ಮಾತನಾಡಿ, ನಮ್ಮ ಜಿಲ್ಲೆಯ ಪ್ರತಿಭೆಗಳೊಂದಿಗೆ ಸಮಾಜದ ವಾಸ್ತವ ಸ್ಥಿತಿಯನ್ನು ತೋರಿಸುವ ಈ ನಮ್ಮ ಚಿತ್ರ ರಾಜ್ಯದಾದ್ಯಂತ ಚರ್ಚೆಯಾಗುತ್ತಿದೆ. ನಿಮ್ಮ ಪ್ರೋತ್ಸಾಹ ಹೀಗೆ ಇರಲಿ ಎಂದು ಸಿನಿಮಾ ನೋಡಲು ಬಂದ ಪ್ರೇಕ್ಷಕರಿಗೆ ಅಭಿನಂದನೆಗಳನ್ನು ಸಲ್ಲಿಸಿದರು.

ಈ ಸಂದರ್ಭದಲ್ಲಿ ಹೆಬ್ಬುಲಿ ಕಟ್ ಸಿನಿಮಾದ ನಾಯಕ ನಟರಾದ ಮೌನೇಶ್ ನಟರಂಗ ನಾಯಕಿಯಾದ ಅನನ್ಯ ನಿಹಾರಿಕ ಮಹಾಂತೇಶ್ ಹಿರೇಮಠ್ ಸಚಿನ್, ರಾಜೇಶ, ಎಸ್‌ಎಸ್ ಹಿರೇಮಠ, ಮಲ್ದಕಲ್ ತಿಮ್ಮಪ್ಪ, ಅರುಣ ದೋತರಬಂಡಿ, ಪ್ರದೀಪ್, ಈರಣ್ಣ, ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ನಾಗರಹಾಳ ಮೊಹರಂ ಸಂಪನ್ನ



**ಜನವಾದಿ ವಾರ್ತೆ**

ಮುದಗಲ್ ಜು 7- ಪಟ್ಟಣ ಸಮೀಪದ ನಾಗರಹಾಳ ಗ್ರಾಮದಲ್ಲಿ ಹಿಂದೂ ಮುಸ್ಲಿಂ ಭಾವಕ್ಯತೆಯ ಸಂಕೇತವಾದ ಮೊಹರಂ ಕೊನೆಯ ದಿನವನ್ನು ವಿಜೃಂಭಣೆ ಯಿಂದ ಆಚರಿಸಲಾಯಿತು.

ಮೌಲಾಲಿ, ಹಿಮಾಮ್ ಹುಸೇನ್, ಹಿಮಾಮ್ ಹಸೇನ್, ಅಬ್ಬಾಸ್ ಅಲಿ, ಹಿಮಾಮ್ ಖಾಸಿಂ, ಲಾಲಾ ಸಾಬ ಆಲಂ ಗಳಿಗೆ ಭಕ್ತರು ಶ್ರದ್ಧಾ ಭಕ್ತಿ ಯಿಂದ ತಮ್ಮ ಹರಕೆಗಳನ್ನು ತೀರಿಸಿದ್ರು. ಇನ್ನು ಈ ಬಾರಿಯ ವಿಶೇಷ ವೆಂದರೆ ಬೆಳಗಾವಿ ಜಿಲ್ಲೆಯ ಗೋಕಾಕ್ ತಾಲೂಕಿನ ಯಳವರು ದೇವರಿಗೆ ಎರಡು ಸಮೆ, ಅಲಮರ್ ಮತ್ತು ಇಪ್ಪತ್ತೇಯಿದು ಸಾವಿರ ರೂ. ಗಳನ್ನು ಕಾಣಿಕೆಯಾಗಿ ನೀಡಿದ್ದಾರೆ.ಇನ್ನು ಆಲಂಗಳ ಮುಂದೆ ಹೆಜ್ಜೆ ಕುಣಿತ ವಿಶೇಷವಾಗಿತ್ತು.

# ಬಿ ಜೆ ಪಿ ಮಂಡಲ ನೂತನ ಅಧ್ಯಕ್ಷರಿಗೆ ಸನ್ಮಾನ



**ಜನವಾದಿ ವಾರ್ತೆ**

ಲಿಂಗಸೂರು ಜು 07- ಪಟ್ಟಣದ ಬಿಜೆಪಿ ಕಾರ್ಯಾಲಯದಲ್ಲಿ ಶಾಸಕ ಮಾನಪ್ಪ ವಜ್ಜಲ್ ಹಾಗೂ ಲಿಂಗಸೂಗೂರು ಮಂಡಲದ ನೂತನ ಅಧ್ಯಕ್ಷರಾದ ಕೆ ನಾಗಭೂಷಣ್ ರವರಿಗೆ ಮಹಿಳಾ ಮೋರ್ಚಾದ ವತಿಯಿಂದ ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಮಹಿಳಾ ಮೋರ್ಚಾದ ಪದಾಧಿಕಾರಿಗಳಾದ ನಾಗರತ್ನ ಸಕ್ರಿ,ಜ್ಯೋತಿ ಸುಂಕದ, ಸುಮಾ ಪಾಟೀಲ್,ಸುಜಾತ ಸಾಲ್ಮನಿ,-ಅಂಬುಜಾ, ಗಂಗಮ್ಮ,ಅಶ್ವಿನಿ ದೇವರಾಜ್,ರೋಹಿಣಿ, ಸಾವಿತ್ರಿ, ಗೀತಾ,ಶೃತಿ ಉಪಸ್ಥಿತರಿದ್ದರು.

# ಕರವೇ ಮುಖಂಡನ ಮೇಲೆ ಪ್ರಕರಣ ರದ್ದತಿಗೆ ಒತ್ತಾಯ

**ಜನವಾದಿ ವಾರ್ತೆ**



ಲಿಂಗಸೂಗೂರು ಜು 7- ಕರ್ನಾಟಕ ರಕ್ಷಣಾ ವೇದಿಕೆ ( ಪ್ರವೀಣ್ ಕುಮಾರ ಶೆಟ್ಟಿ ಬಣ )ದ ಸಂಘಟನೆ ಸಿರವಾರ ತಾಲೂಕ ಘಟಕ ಅಧ್ಯಕ್ಷ ಕೆ. ರಾಘವೇಂದ್ರ ಖಾಜಾನಗೌಡ ಇವರ ವಿರುದ್ಧ ದಾಖಲಿಸಿದ ಪ್ರಕರಣವನ್ನು ಹಿಂಪಡೆಯಬೇಕು ಎಂದು ಲಿಂಗಸೂಗೂರು ಘಟಕದ ವತಿಯಿಂದ ಸಹಾಯಕ ಆಯುಕ್ತರು ಲಿಂಗಸೂಗೂರು ಇವರಿಗೆ ಮನವಿ ಸಲ್ಲಿಸಿ ಒತ್ತಾಯಿಸಿದರು.

ಸಿರವಾರ ತಾಲೂಕಿನ ಪಟ್ಟಣ ಪಂಚಾಯತಿಯ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಕೆರೆ ನಿರ್ಮಾಣ-ಕ್ಕಾಗಿ ಮೀಸಲಿಟ್ಟ ಜಾಗದಲ್ಲಿ ಖಾಸಗಿ ಕಂಪನಿಯವರು ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗೆ ಮರಂ ಅನ್ನು ಜಿಲ್ಲಾಧಿಕಾರಿಗಳು ಕುಡಿಯುವ ನೀರಿನ ಕೆರೆಯನ್ನು ಮಾಡಿಕೊಡಬೇಕೆಂದು ಒಪ್ಪಂದ ಮಾಡಿಕೊಂಡಿದ್ದು, ಈ ಮಾಹಿತಿಯನ್ನು ಪಟ್ಟಣ ಪಂಚಾಯತಿ ಅಧ್ಯಕ್ಷರಿಗೂ ಸರ್ವ ಸದಸ್ಯರಿಗೂ ಹಾಗೂ ಪಟ್ಟಣದ ಮುಖಂಡರಿಗೂ ಯಾವುದೇ ಮಾಹಿತಿ ಇಲ್ಲದೇ ಸರ್ಕಾರದ ಜಮೀನಿನಲ್ಲಿರುವ ಮರಂ ಅನ್ನು ಖಾಸಗಿ ಕಂಪನಿಗಳು ತೆಗೆದುಕೊಂಡು ಹೋಗುವುದನ್ನು ಪ್ರಶ್ನಿಸಿದ್ದಕ್ಕೆ ಕರ್ನಾಟಕ ರಕ್ಷಣಾ ವೇದಿಕೆ ಪ್ರವೀಣಶೆಟ್ಟಿ ಬಣ ತಾಲೂಕ ಅಧ್ಯಕ್ಷರಾದ ರಾಘವೇಂದ್ರ ಖಾಜನಗೌಡ ಇವರ ವಿರುದ್ಧ ಸಹಾಯಕ ಆಯುಕ್ತರು ರಾಯಚೂರು ಇವರ ಒತ್ತಾಯದ ಮೇರೆಗೆ ಪಟ್ಟಣ ಪಂಚಾಯತಿಯ ಮುಖ್ಯಾಧಿಕಾರಿ ತಿಮ್ಮಪ್ಪ ಜಗಲಿ ಇವರ ಮುಖಾಂತರ ಸಿರವಾರ ಪೊಲೀಸ್ ಠಾಣೆಯಲ್ಲಿ ದೂರು ದಾಖಲು ಮಾಡಿರುತ್ತಾರೆ.ಕೆರೆ ನಿರ್ಮಾಣಕ್ಕೆ ಮೀಸಲಿಟ್ಟ ಸ್ಥಳವನ್ನು ಸ್ಥಳೀಯ ಶಾಸಕರು ಮೌಖಿಕವಾಗಿ ಬೇರೆಡೆ ಮಾಡಬೇಕೆಂದು ಹೇಳಿದ್ದರು. ಅವರ ಹೇಳಿಕೆಯನ್ನು ಕೂಡ ಲೆಕ್ಕಿಸದೇ ಮರಂ ಅನ್ನು ಬೇರೆಡೆ ಸಾಗಿಸುತ್ತಿದ್ದಾರೆ. ಸ್ಥಳೀಯವಾಗಿ ಮರಂ ಅನ್ನು ಬಳಸಿಕೊಳ್ಳಲು ಒತ್ತಾಯಿಸಿದ್ದಕ್ಕೆ ಕೆ.ರಾಘವೇಂದ್ರ ಖಾಜನಗೌಡ ಇವರ ಮೇಲೆ ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿ ತಿಮ್ಮಪ್ಪ ಜಗಲಿ ಇವರ ಮುಖಾಂತರ ಠಾಣೆಯಲ್ಲಿ ಪ್ರಕರಣವನ್ನು ದಾಖಲಿಸಿದ್ದಾರೆ.

ಕಾರಣ ಪ್ರಕರಣವನ್ನು ಒಂದು ವಾರದೊಳಗೆ ಹಿಂಪಡೆಯಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಸಂಘಟನೆಯು ಜಿಲ್ಲೆಯಾದ್ಯಂತ ಉಗ್ರ ಹೋರಾಟವನ್ನು ಮಾಡಬೇಕಾಗುತ್ತದೆ ಎಂದು ಮನವಿ ಸಲ್ಲಿಸಿ ಒತ್ತಾಯಿಸಿದ್ದಾರೆ.

ಈ ಸಂದರ್ಭದಲ್ಲಿ ಕರವೇ ಅಧ್ಯಕ್ಷರಾದ ಆಂಜನೇಯ ಹೆಚ್. ಭಂಡಾರಿ, ಕುರುಮೇಶ್ ನಾಯಕ, ಶಿವು ಪತ್ತಾರ, ಸಲೀಂ ಖಾನ್ ಹಾಗೂ ಅಭಿಷೇಕ್ ನಾಯಕ ಸೇರಿದಂತೆ ಇತರರು ಇದ್ದರು.

# ಗ್ರಂಥ ಪಾಲಕಿ ವರ್ಗಾವಣೆ: ಸನ್ಮಾನ



**ಜನವಾದಿ ವಾರ್ತೆ**

ಮುದಗಲ್ ಜು 7- ಪಟ್ಟಣದ ಪ್ರಥಮ ದರ್ಜೆ ಕಾಲೇಜಿನ ಗ್ರಂಥ ಪಾಲಕಿ ನಳಿನಾದೇವಿ ಟಿ ಆರ್ ಸುದೀರ್ಘ 15 ವರ್ಷಗಳ ಕಾಲ ಸೇವೆ ಸಲ್ಲಿಸಿ ಇಂದು ಸರ್ಕಾರ ಪ್ರಥಮ ದರ್ಜೆ ಕಾಲೇಜ್ ಕೋಡಿಹಳ್ಳಿ ಕನಕಪುರ ತಾಲೂಕು ವರ್ಗಾವಣೆಗೊಂಡ ಪ್ರಯುಕ್ತ ಅವರಿಗೆ ಸನ್ಮಾನ ಮಾಡಿ ಕರ್ತವ್ಯ ದಿಂದ ಬಿಡುಗಡೆಗೊಳಿ ಅವರ ಮುಂದಿನ ಸೇವೆ ಸುಖಕರವಾಗಿರಲೆಂದು ಹಾರೈಸುತ್ತಾ ಪ್ರಾಂಶುಪಾಲರು ಹಾಗೂ ಸಿಬ್ಬಂದಿ ವರ್ಗದವರು ಸರ್ಕಾರ ಪ್ರಥಮ ದರ್ಜೆ ಕಾಲೇಜು ಮುದುಗಲ್ ಶುಭ ಕೋರಿದರು

ಈ ಸಂದರ್ಭದಲ್ಲಿ ಪ್ರಾಂಶುಪಾಲರಾದ ಡಾ ಸಿದ್ದರಾಮ್ ಪಾಟೀಲ್ ಸತೀಶ್ ಕುಮಾರ್ ಹಳ್ಳಿ, ಸೋಮಪ್ಪ ,ಮಲ್ಲಿಂಗಪ್ಪ, ಮೋಹಿನ್, ಮೌನೇಶ್, ವಿಜಯಲಕ್ಷ್ಮಿ ,ರತ್ನಮ್ಮ ತುರುಮುರಿ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು

# ಹೂನೂರು -ಕಿಡದೂರು ಗ್ರಾಮಗಳ ಸ್ನೇಹದ ಸಂಕೇತ ಮೊಹರಂ ಹಬ್ಬ

**(ಬಸವರಾಜ ಹೂನೂರು)**



- ಸುಮಾರು ವರ್ಷಗಳಿಂದ ಎರಡು ಗ್ರಾಮಗಳ ಆಲಂ ದೇವರಗಳ ಭೇಟಿ
- ಎರಡು ಗ್ರಾಮಗಳ ಸ್ನೇಹದ ಸಂಕೇತವಾದ ಮೊಹರಂ ಹಬ್ಬ ಆಚರಣೆ
- ಗ್ರಾಮಗಳಲ್ಲಿ ಜಾತಿಭೇದವಿಲ್ಲದೆ ಮೊಹರಂ ಹಬ್ಬ ಆಚರಣೆ
- ಹಳ್ಳದಲ್ಲಿ ಎರಡು ಗ್ರಾಮಗಳ ಆಲಂ ದೇವರುಗಳ ದಫನ್ ಕಾರ್ಯಕ್ರಮ
- ಅದ್ದೂರಿಯಾಗಿ ಐದು ದಿನಗಳ ಕಾಲ ಶ್ರದ್ಧಾ ಭಕ್ತಿಯಿಂದ ಮೊಹರಂ ಹಬ್ಬ ಆಚರಣೆ

ಮುದಗಲ್ ಜು 7- ಹಿಂದೂ ಮುಸ್ಲಿಂ ಭಾವೈಕ್ಯತೆ ಮೊಹರಂ ಹಬ್ಬದ ಪ್ರಯುಕ್ತ ಲಿಂಗಸುಗೂರು ತಾಲ್ಲೂಕಿನ ಕಡೆ ಗ್ರಾಮ ಹೂನೂರು ಹಾಗೂ ಕುಷ್ಟಗಿ ತಾಲ್ಲೂಕಿನ ಕಡೆ ಗ್ರಾಮ ಕಿಡದೂರು ಆಲಂ ದೇವರುಗಳು ಹಲವಾರು ವರ್ಷಗಳಿಂದ ಭೇಟಿ ನೀಡುವ ಮೂಲಕ ಎರಡು ಗ್ರಾಮಗಳ ಈ ಹಬ್ಬದ ಸ್ನೇಹದ ಸಂಕೇತವಾಗಿದೆ.

ಹೂನೂರು ಹಾಗೂ ಕಿಡದೂರು ಗ್ರಾಮದಲ್ಲಿ ಮುಸ್ಲಿಂ ಕುಟುಂಬದವರ ಮನೆ ಕೆಲವೇ ಮಾತ್ರ ಇವೆ ಆದರೆ ಇಲ್ಲಿ ಸರ್ವ ಧರ್ಮದವರು ಸೇ-ರಿಕೊಂಡು ಜಾತಿಯಿಂದ ದೂರವಿದ್ದು ಪ್ರೀತಿಯಿಂದ ಹತ್ತಿರವಿದ್ದು,ಹಿಂದೂ ಮುಸ್ಲಿಂರ ಭಾವೈಕ್ಯತೆಯ ಕೊಂಡಿಂ-ದಾಗಿ ಮೊಹರಂ ಹಬ್ಬವನ್ನು ಆಚರಿಸುವದು ಕಂಡು ಬರುತ್ತದ್ದೆ ಮಸೂದಿಯನ್ನು ಸಣ್ಣ ಬಣ್ಣದಿಂದ ಸ್ವಚ್ಛತೆ ಮಾಡಿ ವಿದ್ಯುತ್ ದೀಪಗಳ ಗಳಿಂದ ಅಲಂಕಾರ ಮಾಡಿ ಐದು ದಿನಗಳ ಕಾಲ ಆಲಂ ದೇವರುಗಳ ಪ್ರತಿಷ್ಠಾಪನೆ ಮಾಡುತ್ತಾರೆ ಮೂರನೇ ದಿನ ಮೌಲಾಲಿ ಕತ್ತಲ ರಾತ್ರಿ ಹಾಗೂ ನಾಲ್ಕನೇ ದಿನ ಹಸೇನ ಹುಸೇನಿ ಹಾಗೂ ಹುಸೇನ್ ಬಾಷಾ ಸೇ-ರಿದಂತೆ ಉಳಿದ ಆಲಂ ದೇವರುಗಳ ಕತ್ತಲ್ ರಾತ್ರಿ ನಡೆಯುತ್ತದೆ ರಾತ್ರಿ ವೇಳೆ ಅಲಾಯಿ ಪದಗಳು,ಮಕ್ಕಳ ಹೆಜ್ಜೆ ಕುಣಿತ, ಪಾತ್ರಧಾರಿಗಳ ಹಾಸ್ಯ ನಾಟಕ, ನೋಡುಗರ ಗಮನ ಸೆಳೆಯುವುದು. ಶ್ರದ್ಧಾಭಕ್ತಿಯಿಂದ ಸಕ್ಕರೆ, ಮುಡುಪು, ಓದಕಿ ನೀಡುವ ಮೂಲಕ ಭಕ್ತರು ದೇವರಿಗೆ ಹರಕೆ ತೀರಿಸುವರು ಐದನೇ ದಿನ ಗ್ರಾಮಗಳ ಎಲ್ಲಾ ದೇವಸ್ಥಾನಗಳಿಗೆ ಭೇಟಿ ನೀಡುತ್ತಾ ಆಲಂ ದೇವರುಗಳು ಲಿಂಗಸುಗೂರು ಹಾಗೂ ಕುಷ್ಟಗಿ ತಾಲೂಕಿನ ಮಧ್ಯೆವಿರುವ ಹಳ್ಳಕ್ಕೆ ತಲುಪುತ್ತವೆ. ಹಳ್ಳದಲ್ಲಿ ಕಿಡದೂರು ಹಾಗೂ ಹೂನೂರು ಗ್ರಾಮದ ಆಲಂ ದೇವರುಗಳು ಪರಸ್ಪರ ಭೇಟಿ ನೀಡುವ ಮೂಲಕ ಐದು ದಿನಗಳ ಮೊಹರಂ ಹಬ್ಬಕ್ಕೆ ತೆರೆ ಬೀಳಲಿದೆ.

ಜನವಾದಿ
ಜಾಹೀರಾತಿಗಾಗಿ ಸಂಪರ್ಕಿಸಿ: 9448300139

# ಜಿ.ಪಿ.ಟಿ ಶಾಲಾ ಶಿಕ್ಷಕರನ್ನು ಬಿ.ಎಲ್.ಓ. ಕಾರ್ಯದಿಂದ ಬಿಡುಗಡೆಗೊಳಿಸಿ – ಗೋಪಾಲ ನಾಯಕ

**ಜನವಾದಿ ವಾರ್ತೆ**



ಮಾನ್ವಿ ಜು 7- ಪಟ್ಟಣದ ತಹಸೀಲ್ದಾರ್ ಕಚೇರಿಯ ಆವರಣದಲ್ಲಿ ಕರ್ನಾಟಕ ರಾಜ್ಯ ಪದವೀಧರ ಪ್ರಾಥಮಿಕ ಶಿಕ್ಷಕರ ಸಂಘ ಬೆಂಗಳೂರು ತಾಲೂಕು ಘಟಕದಿಂದ ತಹಶೀಲ್ದಾರ ಭೀಮರಾಯ ರಾಮಸಮುದ್ರ ರವರಿಗೆ ತಾ.ಅಧ್ಯಕ್ಷರಾದ ಗೋಪಾಲ ನಾಯಕ ಮನವಿ ಸಲ್ಲಿಸಿ ಮಾತನಾಡಿ ತಾಲೂಕಿನಲ್ಲಿರುವ ಶಾಲೆಗಳಲ್ಲಿ ಶಿಕ್ಷಕರ ಸಂಖ್ಯೆ ಕಡಿಮೆ ಇರುವುದರಿಂದ ಶಾಲೆಗಳಲ್ಲಿ ಮಕ್ಕಳಿಗೆ ಪಾಠ ಭೋದನೆ ಸೇರಿದಂತೆ ಶಾಲಾ ಕಾರ್ಯಚಟುವಟಿಕೆಗಳ ನಿರ್ವಹಣೆ ಮಾಡುವುದು ಅತ್ಯಂತ ಕಷ್ಟವಾಗಿರುವುದರಿಂದ ಹಾಗೂ ಮಕ್ಕಳ ಶೈಕ್ಷಣಿಕ ಗುಣಮಟ್ಟದ ಹಿತದೃಷ್ಟಿಯಿಂದ ಶಾಲಾ ಶಿಕ್ಷಕರಿಗೆ ಬಿ.ಎಲ್.ಓ. ಕಾರ್ಯನಿರ್ವಹಣೆ ಕಷ್ಟವಾಗುತ್ತಿರುವುದರಿಂದ ಜಿ.ಪಿ.ಟಿ ಶಾಲಾ ಶಿಕ್ಷಕರನ್ನು ಬಿ.ಎಲ್.ಓ. ಕಾರ್ಯದಿಂದ ಬಿಡುಗಡೆಗೊಳಿಸಬೇಕು ಎಂದು ಒತ್ತಾಯಿಸಿದರು.

ಜಿ.ಪಿ.ಟಿ. ಸಂಘದ ತಾ. ಉಪಾಧ್ಯಕ್ಷರು ವಿಜಯಕುಮಾರ ,ಸಿರವಾರ ತಾ. ಅಧ್ಯಕ್ಷರು ಇಸಾಕ್, ಪ್ರಶಾಂತ,ಹನುಮಂತಪ್ಪ, ಬಸವರಾಜ,ಶೃತಿ ಪತ್ತಾರ, ಶಂಕ್ರಪ್ಪ,ನರಸಿಂಹ.ಸಿ.ಎಂ, ಸೇರಿದಂತೆ ಇನ್ನಿತರರು ಇದ್ದರು.

# ಬೀಜ, ಗೊಬ್ಬರ ಬ್ಲಾಕ್‌ನಲ್ಲಿ ಮಾರಾಟವಾಗದಂತೆ ಎಚ್ಚರವಹಿಸಿ – ಬಸನಗೌಡ ಬಾದರ್ಲಿ

**ಜನವಾದಿ ವಾರ್ತೆ**



ಸಿಂಧನೂರು ಜು 07 – ರೈತ-ರಿಗೆ ಬೀಜ ಹಾಗೂ ರಸಗೊಬ್ಬರ ಸರಿಯಾದ ಬೆಲೆಗೆ ದೊರೆಯಬೇಕು. ಕೆಲವು ಡೀಲರ್ಸ್ ಕೃತಕ ಅಭಾವ ಸೃಷ್ಟಿಸಿ ಬ್ಲಾಕ್‌ನಲ್ಲಿ ಮಾರಾಟ ಮಾಡುತ್ತಾರೆ. ಈ ಬಗ್ಗೆ ಎಚ್ಚರಿಕೆ ವಹಿಸುವಂತೆ ವಿಧಾನ ಪರಿಷತ್ ಶಾಸಕ ಬಸನಗೌಡ ಬಾದರ್ಲಿ ಕೃಷಿ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಸೋಮವಾರ ನಗರದ ಜನಸ್ಪಂದನಾ ಕಾರ್ಯಾಲಯದಲ್ಲಿ ಕೃಷಿ ಇಲಾಖೆ ಅಧಿಕಾರಿಗಳ ಸಭೆ ನಡೆಸಿ ಅವರು ಮಾತನಾಡಿದರು. ಮುಂಗಾರು ಮಳೆ ಆರಂಭವಾಗಿದ್ದು, ಈಗಾಗಲೇ ರೈತರು ಕೃಷಿ ಚಟುವಟಿಕೆಗಳಿಗೆ ಸಿದ್ದತೆ ಮಾಡಿಕೊಳ್ಳುತ್ತಿದ್ದು, ಕ್ಷೇತ್ರ ವ್ಯಾಪ್ತಿಯಲ್ಲಿ ರೈತರು ಬೆಳೆಯುವ ಬೆಳೆಗಳಿಗೆ ಸಂಬಂಧಿಸಿದಂತೆ ಬೀಜ ಹಾಗೂ ರಸಗೊಬ್ಬರ ಕೊರತೆಯಾಗದಂತೆ ಎಚ್ಚರ ವಹಿಸಬೇಕು. ಸರ್ಕಾರ ನಿಗದಿಪಡಿಸಿದ ದರದಲ್ಲಿ ಡೀಲರ್ಸ್‌ಗಳಿಂದ ರೈತರಿಗೆ ರಸಗೊಬ್ಬರ ತಲುಪಬೇಕು. ಸಿಂಧನೂರು ತಾಲೂಕಿಗೆ ರಸಗೊಬ್ಬರಗಳ ಕೊರತೆ ಹಾಗೂ ಬೇಡಿಕೆಯ ಬಗ್ಗೆ ನಿಮ್ಮ ಮೇಲಾಧಿಕಾರಿಗಳ ಗಮನಕ್ಕೆ ಹಾಗೂ ನಮ್ಮ ಗಮನಕ್ಕೆ ತನ್ನಿ, ರೈತರಿಗೆ ಸಮರ್ಪಕವಾಗಿ ರಸಗೊಬ್ಬರ ಸರಬರಾಜು ಮಾಡಬೇಕು ಎಂದು ಸಭೆಯಲ್ಲಿ ತಿಳಿಸಿದರು.

ತಾಲೂಕಾ ಕೃಷಿಕ ಸಮಾಜದ ಅಧ್ಯಕ್ಷ ಹೊನ್ನನಗೌಡ ಬೆಳಗುರ್ಕಿ, ಕೃಷಿ ಸಹಾಯಕ ನಿರ್ದೇಶಕ ಮಲ್ಲಿಕಾರ್ಜುನ, ತಾಲೂಕಿನ ವಿವಿಧ ರೈತ ಸಂಪರ್ಕ ಕೇಂದ್ರದ ಕೃಷಿ ಅಧಿಕಾರಿಗಳು, ಇಫ್ಕೋ, ಕೋರಮಂಗಲ್ ಹಾಗೂ ಕೆಎಸ್‌ಎಸ್‌ಸಿ ಕಂಪನಿಗಳ ಅಧಿಕಾ-ರಿಗಳು ಭಾಗವಹಿಸಿದ್ದರು.

Printed by , Published by, Owned by : basavaraj H , Printed and Published at Basavashree Printers and Publishers, H.No.1-11-54/32, Prashanth Colony, RAICHUR-584101. Editor. BASAVARAJ H